ಸಂಪುಟ : 8 ಸಂಚಿಕೆ : 217 ಪುಟ : 4 ಬೆಲೆ : 3.00 ಮಂಗಳವಾರ ಅಕ್ಟೋಬರ್ 03, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ...

VIJAYA SAKSHI KANNADA DAILY ಕನ್ನಡ ದಿನಪತ್ರಿಕೆ

Volume : 8 Issue : 217 Pages : 4 Price : 3.00 Tuesday October 03, 2023 Gadag RNI No: KARKAN/2015/63412 E-mail: vijayasakshidaily@gmail.com Post Regn.No: GDG/72/2023-25




## ನೀರು ಪೂರೈಕೆಯಲ್ಲಿ ವ್ಯತ್ಯಯ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣಕ್ಕೆ ತುಂಗಭದ್ರಾ ನದಿಯಿಂದ ಪೂರೈಕೆಯಾಗುವ ನೀರಿನ ಪೈಪ್‌ಲೈನ್‌ನಲ್ಲಿ ಮೇವುಂಡಿ ಹಾಗೂ ಸೂರಣಗಿ ಮಾರ್ಗ ಮಧ್ಯದಲ್ಲಿನ ಮುಖ್ಯ ಕೊಳವೆ ಮಾರ್ಗವು ಹಾಳಾಗಿದ್ದು, ನೀರು ಪೋಲಾಗುತ್ತಿದೆ. ರಿಪೇರಿ ಕಾರ್ಯ ಕೈಗೊಳ್ಳುತ್ತಿರುವುದರಿಂದ ಅಕ್ಟೋಬರ್ 3 ಹಾಗೂ 4ರಂದು 2 ದಿನಗಳ ಕಾಲ ನೀರು ಸರಬರಾಜು ಸ್ಥಗಿತಗೊಳ್ಳಲಿದೆ.

ಕಾರಣ, ಸಾರ್ವಜನಿಕರು ಸಹಕರಿಸಬೇಕೆಂದು ಪುರಸಭೆ ಮುಖ್ಯಾಧಿಕಾರಿ ಶಂಕರ ಹುಲ್ಲಮ್ಮನವರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



**ಶಿರೋಳ:** ಮಹಾತ್ಮ ಗಾಂಧೀಜಿ ಜಯಂತಿ ಅಂಗವಾಗಿ ಸಮೀಪದ ರೋಣ ತಾಲೂಕಿನ ಮೆಣಸಗಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಿರಿಯ ನಾಗರಿಕರಾದ ಶೇಖರಪ್ಪ ಚವಡಿ (105) ಹಾಗೂ ಶಿವಸಂಗವ್ವ ಶೇಖರಪ್ಪ ಚವಡಿ (99) ಶತಾಯುಷಿ ದಂಪತಿಗಳಿಗೆ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾದ ಬಸವರಾಜ್, ಮೆಣಸಗಿ, ಗ್ರಾಂ.ಪಂ ಅಧ್ಯಕ್ಷರಾದ ಈಶ್ವರಪ್ಪ ಮುದೇನೂರು ಹಾಗೂ ಗ್ರಾಮ ಪಂಚಾಯತ್ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

### ಮಹಾತ್ಮ ಗಾಂಧೀಜಿಯವರ 154ನೇ ಜಯಂತಿ ಕಾರ್ಯಕ್ರಮದಲ್ಲಿ ಶಾಸಕ ಸಂಕನೂರು

# ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಜಗತ್ತು ಕಂಡ ಅಪರೂಪದ ವ್ಯಕ್ತಿ

■ ವಿಜಯಸಾಕ್ಷಿ ಸುದ್ದಿ, ಗದಗ

ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಜಗತ್ತು ಕಂಡ ಅಪರೂಪದ, ಶ್ರೇಷ್ಠ ವ್ಯಕ್ತಿ ಎಂದು ವಿಧಾನ ಪರಿಷತ್ ಸದಸ್ಯ ಎಸ್.ವಿ. ಸಂಕನೂರ ತಿಳಿಸಿದರು.

ಗದಗ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ಲ್ಲಿ ಸೋಮವಾರದಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಆಯೋಜಿಸಲಾಗಿದ್ದ ಮಹಾತ್ಮ ಗಾಂಧೀಜಿಯವರ 154ನೇ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಹಾತ್ಮ ಗಾಂಧೀಜಿ ಮತ್ತು ಲಾಲ್‌ಬಹದ್ದೂರ ಶಾಸ್ತ್ರಿಯವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿದರು.

ಮಹಾತ್ಮ ಗಾಂಧೀಜಿಯವರು ಸತ್ಯ, ಪ್ರೇಮ, ಅಹಿಂಸೆ ಮೂಲಕ ನಮ್ಮ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟಿದ್ದಾರೆ. ಸತ್ಯಾಗ್ರಹ ಹಾಗೂ ಅಸಹಕಾರ ಚಳುವಳಿಗಳು ಅವರ ಹೋರಾಟದ ಅಸ್ತ್ರಗಳಾಗಿದ್ದವು. ಸುದೀರ್ಘವಾದ ಹೋರಾಟದ ನಂತರ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಲಭಿಸಿತು. ದೇಶದ ಜನರ ಕಲ್ಯಾಣಕ್ಕಾಗಿ ಹಲವಾರು ಹೋರಾಟಗಳನ್ನು ಮಾಡಿದ್ದಾರೆ. ಜಾತೀಯತೆ, ಅಸ್ಪೃಶ್ಯತೆ, ಭ್ರಷ್ಟಾಚಾರ ನಿರ್ಮೂಲನೆ, ಗೋರಕ್ಷಣೆ ಮಾಡಲು ಹಲವಾರು ಹೋರಾಟಗಳನ್ನು ದೇಶದ ಒಳಿತಿಗಾಗಿ ಮಾಡಿದ್ದಾರೆ ಎಂದು ಅಭಿಪ್ರಾಯಪಟ್ಟರು.



ಲಾಲ್ ಬಹದ್ದೂರ ಶಾಸ್ತ್ರೀಜಿಯವರು ಬಡ ಕುಟುಂಬದಲ್ಲಿ ಹುಟ್ಟಿದರು. ಲಾಲ್‌ಬಹದ್ದೂರ ಶಾಸ್ತ್ರೀಯವರು ಎರಡು ವರ್ಷಗಳ ಕಾಲ ಪ್ರಧಾನಿಯಾಗಿ ದೇಶಕ್ಕೆ ಸುಭದ್ರ, ಆಡಳಿತ ಒದಗಿಸಿ ಕೊಟ್ಟವರಾಗಿದ್ದಾರೆ. ಅವರ ಕರ್ತವ್ಯ ನಿಷ್ಠೆ, ಪ್ರಾಮಾಣಿಕತೆ, ನಿರ್ಭಯತೆ ಎಲ್ಲರಿಗೂ ಆದರ್ಶಪ್ರಾಯವಾಗಿವೆ. ಇಂದಿನ ವಿದ್ಯಾರ್ಥಿಗಳು ಗಾಂಧೀಜಿ ಹಾಗೂ ಲಾಲಬಹದ್ದೂರ ಶಾಸ್ತ್ರಿ ಅವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ಹುಲಕೋಟಿ ಸಹಕಾರಿ ರೇಡಿಯೋ ನಿರ್ದೇಶಕರಾದ ಜೆ.ಕೆ. ಜಮಾದಾರ ಮಾತನಾಡಿ, ಮಹಾತ್ಮ ಗಾಂಧೀಜಿಯವರು ಶತಮಾನದ ಶ್ರೇಷ್ಠೋತ್ತಮ ಮಾನವರಾಗಿದ್ದಾರೆ. ಗಾಂಧೀಜಿಯುವರೆಂದರೆ ಅಂತಾರಾಷ್ಟ್ರೀಯ ಭಾವೈಕ್ಯತೆಯ ಸಂಕೇತ. ಗಾಂಧೀಜಿಯವರನ್ನು ಯುಗ ದೇವ ಎಂದು ಕೆಲವು ತಜ್ಞರು ಕರೆದಿದ್ದಾರೆ.

ಗಾಂಧೀಜಿಯವರು ಚರ್ಚೆ ಮಾಡುವ ವ್ಯಕ್ತಿಯಲ್ಲ ಅದರ ಬದಲಾಗಿ ಹೃದಯದಲ್ಲಿಟ್ಟು ಧ್ಯಾನಿಸುವ ವ್ಯಕ್ತಿಯಾಗಿದ್ದಾರೆ. ಮಾನವೀಯ ಮೌಲ್ಯಗಳ ಸಂಗ್ರಹವೇ ಗಾಂಧೀಜಿಯಾಗಿದ್ದಾರೆ. ಗಾಂಧೀಜಿಯವರ ಬಗ್ಗೆ ಪ್ರಕಟವಾಗಿರುವ ಸಾಹಿತ್ಯ 450 ಕ್ಕೂ ಹೆಚ್ಚು ಜೀವನ ಚರಿತ್ರೆಗಳು ಬೇರೆ ಬೇರೆ ಭಾಷೆಗಳಲ್ಲಿ ಪ್ರಕಟವಾಗಿವೆ. ಒಟ್ಟು 32,000 ಪುಸ್ತಕಗಳು ಪ್ರಕಟವಾಗಿವೆ. 260 ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನ ಮಾಡಲು ಗಾಂಧೀಜಿಯವರ ಕುರಿತು ಸಂಶೋಧನಾ ಕೇಂದ್ರಗಳಿವೆ. ಹಲವಾರು ಜನ ನೋಬಲ್ ಪ್ರಶಸ್ತಿ ವಿಜೇತರೂ ಸಹ ಗಾಂಧೀಜಿಯವರ ರಾಜಕೀಯ ವಿಚಾರಗಳನ್ನು ಅನುಸರಿಸಬೇಕೆಂದು ಅಭಿಪ್ರಾಯಪಟ್ಟಿದ್ದಾರೆ ಎಂದರು.

ಲಾಲ ಬಹದ್ದೂರ ಶಾಸ್ತ್ರೀಜಿಯವರು ▶▶3 ನೇ ಪುಟಕ್ಕೆ

> ಸ್ವಾತಂತ್ರ್ಯ ಸಿಕ್ಕ ನಂತರ ಭಾರತ ದೇಶವನ್ನು ರಾಮರಾಜ್ಯವನ್ನಾಗಿ ಮಾಡುವ ಕನಸು ಗಾಂಧೀಜಿಯವರು ಹೊಂದಿದ್ದರು. ಇಂದಿನ ನಾಯಕರು, ಅಧಿಕಾರಿಗಳು ಈ ಬಗ್ಗೆ ಆತ್ಮವಿಮರ್ಶೆ ಮಾಡಿಕೊಳ್ಳಬೇಕಾಗಿದೆ. ಸಂಪೂರ್ಣವಾಗಿ ರಾಮರಾಜ್ಯ ಮಾಡಲು ಆಗಿದೆಯೇ ಅಥವಾ ಇಲ್ಲವೋ ಎನ್ನುವ ಬಗ್ಗೆ ಗಂಭೀರ ಚಿಂತನೆ ಮಾಡಬೇಕಾಗಿದೆ.
>
> **–ಎಸ್.ವಿ. ಸಂಕನೂರು,** ವಿಧಾನ ಪರಿಷತ್ ಸದಸ್ಯರು.

## ಅ.4ರಂದು ಅಷ್ಟಭುಜ ಈಶ್ವರ ದೇವಸ್ಥಾನದ ಕಳಸಾರೋಹಣ, ಲೋಕಾರ್ಪಣೆ ಕಾರ್ಯಕ್ರಮ

■ ವಿಜಯಸಾಕ್ಷಿ ಸುದ್ದಿ, ಗದಗ

ಅಕ್ಟೋಬರ್ 4 ರಂದು ಬುಧವಾರ ನಗರದ ಸಂಭಾಪೂರ ರಸ್ತೆಯಲ್ಲಿನ ಕೇಶವ ಪಾರ್ಕ್‌ನ 3ನೇ ಅಡ್ಡ ರಸ್ತೆಯಲ್ಲಿ ನಿರ್ಮಿಸಿರುವ ಅಷ್ಟಭುಜ ಈಶ್ವರ ದೇವಸ್ಥಾನದ ಕಳಸಾರೋಹಣ ಮತ್ತು ದೇವಸ್ಥಾನ ಲೋಕಾರ್ಪಣಾ ಕಾರ್ಯಕ್ರಮ ಜರುಗಲಿದೆ ಎಂದು ಕೇಶವ ಬಡಾವಣೆಯ ಅಧ್ಯಕ್ಷ ಅಂದಪ್ಪ ಬಿಂಗಿ ಹೇಳಿದರು.

ಅವರು ಸೋಮವಾರ ನಗರದ ಪತ್ರಿಕಾ ಭವನದಲ್ಲಿ ಆಯೋಜಿಸಲಾಗಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಬುಧವಾರ ಬೆಳಗ್ಗೆ 9.15 ಕ್ಕೆ ಅಡ್ನೂರ ಮಠದ ಅಭಿನವ ಪಂಚಾಕ್ಷರ ಶಿವಾಚಾರ್ಯ ಶ್ರೀಗಳಿಂದ ಪ್ರಾಣ ಪ್ರತಿಷ್ಠಾಪಣೆ ಕಾರ್ಯಕ್ರಮ ಹಾಗೂ ನಾಡಿನ ಹರಗುರು ಚರ ಮೂರ್ತಿಗಳ ನೇತೃತ್ವದಲ್ಲಿ ಕಳಸಾರೋಹಣ ಜರುಗಲಿದೆ.



ಸಂಜೆ 6 ಕ್ಕೆ ಧರ್ಮ ಸಭೆ ಜರುಗಲಿದ್ದು, ದಿವ್ಯ ಸಾನ್ನಿಧ್ಯವನ್ನು ಹೊಸಳ್ಳಿ ಬೂದೀಶ್ವರ ಮಠದ ಬೂದೀಶ್ವರ ಶ್ರೀಗಳು, ಅಧ್ಯಕ್ಷತೆಯನ್ನು ಅಡ್ನೂರ ಮಠದ ಅಭಿನವ ಪಂಚಾಕ್ಷರ ಶಿವಾಚಾರ್ಯರು, ನೇತೃತ್ವವನ್ನು ಬಳಗಾನೂರಿನ ಶಿವಶಾಂತವೀರ ಶರಣರು, ಮಣಕವಾಡ ದೇವಮಂದಿರದ ಅಭಿನವ ಮೃತ್ಯುಂಜಯ ಶ್ರೀಗಳು, ವೀರೇಶ್ವರ ಪುಣ್ಯಾಶ್ರಮದ ಕಲ್ಲಯ್ಯಜ್ಜನವರು, ಬೆಳಹೋಡ ಸಿದ್ಧಾರೂಢ ಮಠದ ಪರಿಪೂರ್ಣಾನಂದ ಭಾರತಿ ಶ್ರೀಗಳು ವಹಿಸುವರು.

ಶಂಭುಲಿಂಗಯ್ಯ ಶಾಸ್ತ್ರಿಗಳು ಹಿರೇಮಠ ಹಿರೇಮಲ್ಲೂರ ಅವರಿಂದ ವೈದಿಕ ಪೂಜೆಗಳು ನೆರವೇರುವವು. ಲೋಕಾರ್ಪಣೆಯನ್ನು ಕಾನೂನು, ಪ್ರವಾಸೋದ್ಯಮ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ನೆರವೇರಿಸುವರು. ಅತಿಥಿಗಳಾಗಿ ರೋಣ ಶಾಸಕ ಜಿ.ಎಸ್.ಪಾಟೀಲ, ನಗರಸಭೆಯ ಅಧ್ಯಕ್ಷೆ ಉಷಾ ದಾಸರ, 27ನೇ ವಾರ್ಡ್‌ನ ಸದಸ್ಯೆ ಲಲಿತಾ ಅಸೂಟಿ, ಜಿ.ಪಂ ಮಾಜಿ ಅಧ್ಯಕ್ಷ ಸಿದ್ಧಲಿಂಗೇಶ್ವರ ಪಾಟೀಲ, ನಗರಸಭೆ ಮಾಜಿ ಅಧ್ಯಕ್ಷ ಬಿ.ಬಿ.ಅಸೂಟಿ, ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ ಮಧುಸೂಧನ ಪುಣೇಕರ್, ಬಿಜೆಪಿ ಮುಖಂಡ ವಿಜಯಕುಮಾರ ಗಡ್ಡಿ, ಸುರೇಶ ಶೆಟ್ಟರ, ಜಿ.ಎಂ.ಪಲ್ಲೇದ, ಅಶೋಕ ಮಾನ್ವಿ, ಜಗದೀಶ ಹುಬ್ಬಳ್ಳಿಮಠ, ಸುಭಾಸಪ್ಪ ಕೊಟಗಿ, ಆರ್.ಜಿ.ಸಾಹುಕಾರ, ಶಿವಕುಮಾರ ಕುಷ್ಟಗಿ, ಮಲ್ಲಿಕಾರ್ಜುನಪ್ಪ ಶಿರೂರ ಆಗಮಿಸಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಜಗದೀಶಗೌಡ ಹುಡೇದ, ಬಸಯ್ಯ ಇಟಗಿಮಠ, ರಮೇಶ ಕುಂಬಾರ, ಉಮೇಶ ಮುಳ್ಳಾಳ, ಗುರುಲಿಂಗಪ್ಪ ನಿಡಗುಂದಿ, ಶರಣಪ್ಪ ಪಲ್ಲೇದ, ಬಸವರಾಜ ಕೊಟಗಿ, ಬಸಯ್ಯ ರುದ್ರಾಪೂರಮಠ, ಬಸವರಾಜ ಕುಂಬಾರ, ಸಂಗನಬಸಪ್ಪ ಕುಂಬಾರ ಮುಂತಾದವರು ಇದ್ದರು.

## ಸಚಿವ ಎಚ್.ಕೆ ಪಾಟೀಲರಿಂದ ಬೈಕ್ ವಿತರಣೆ



■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ–ಬೆಟಗೇರಿ ಶಹರ ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಕಾನೂನು, ಸಂಸದೀಯ ವ್ಯವಹಾರ, ಪ್ರವಾಸೋದ್ಯಮ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಕೆ ಪಾಟೀಲರು ಬೈಕ್ ವಿತರಣೆ ಮಾಡಿದರು.

ಈ ಸಂದರ್ಭದಲ್ಲಿ ವಾಲ್ಮೀಕಿ ಪ.ಪಂಗಡ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ ಎಚ್.ಆರ್ ನಾಯಕ, ವಿಕಾಸ್ ನಾಯಕ್, ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಬಿ.ಬಿ ಅಸೂಟಿ, ಗದಗ ಜಿಲ್ಲಾ ಯುವ ಕಾಂಗ್ರೆಸ್ ಘಟಕದ ಅಧ್ಯಕ್ಷ ಅಶೋಕ್ ಮಂದಾಲಿ, ಗದಗ–ಬೆಟಗೇರಿ ಶಹರ ಪ.ಪಂಗಡದ ಅಧ್ಯಕ್ಷ ಶಿವಪ್ಪ ತಿಪ್ಪಣ್ಣ ಬಳ್ಳಾರಿ ಸೇರಿದಂತೆ ಫಲಾನುಭವಿಗಳಾದ ದ್ಯಾಮನಗೌಡ ಗೌಡರ, ಮಂಜುನಾಥ್ ಫಲದಡ್ಡಿ, ಪ್ರವೀಣ್ ನಾಯ್ಕರ್, ಬಸವರಾಜ್ ಕಡಕೋಳ, ಗುರುಸ್ವಾಮಿ ಕುಪ್ಪರ್, ರಮೇಶ್ ವಟ್ಟಿ, ಲಕ್ಷ್ಮಣ ನಗಲದಿನ್ನಿ, ಮಾರುತಿ ಕಾತರಕಿ, ಜಗದೀಶ್ ಗೊಣ್ಣಾಗರ, ಗದಗ ತಾಲೂಕಾಧ್ಯಕ್ಷರಾದ ಆದಪ್ಪ ಮಾರೆಪ್ಪನವರ, ಕೃಷ್ಣಪ್ಪ ದೇವರಮನಿ ಉಪಸ್ಥಿತರಿದ್ದರು.

## ಬಿಜೆಪಿ ಕಾರ್ಯಾಲಯದಲ್ಲಿ ಗಾಂಧೀಜಿ, ಶಾಸ್ತ್ರೀಜಿ ಜಯಂತಿ ಆಚರಣೆ



■ ವಿಜಯಸಾಕ್ಷಿ ಸುದ್ದಿ, ಗದಗ

ಭಾರತೀಯ ಜನತಾ ಪಾರ್ಟಿ ಗದಗ ಜಿಲ್ಲಾ ಕಾರ್ಯಾಲದಯಲ್ಲಿ ಸೋಮವಾರ ಮಹಾತ್ಮ ಗಾಂಧೀಜಿ ಹಾಗೂ ಲಾಲ್‌ಬಹದ್ದೂರ ಶಾಸ್ತ್ರಿರವರ ಜನ್ಮದಿನವನ್ನು ಆಚರಿಸಲಾಯಿತು.

ಮುಖ್ಯ ಅತಿಥಗಳಾಗಿ ಆಗಮಿಸಿದ್ದ ವಿಧಾನ ಪರಿಷತ್ ಸದಸ್ಯ ಎಸ್.ವ್ಹಿ ಸಂಕನೂರ ಮಾತನಾಡಿ, ಗಾಂಧೀಜಿಯವರು ಅಂಹಿಸಾ ಪ್ರೇಮಿಗಳು, ಬ್ರೀಟಿಷರನ್ನು ಅಂಹಿಸಾ ಧರ್ಮದ ಮೂಲಕ ಭಾರತ ಬಿಟ್ಟು ಹೋಗುವ ಹಾಗೆ ಮಾಡಿದರು. ಗಾಂಧೀಜಿಯವರ ತತ್ವ ಮತ್ತು ▶▶3 ನೇ ಪುಟಕ್ಕೆ

## ಅನ್ನದಾನೇಶ್ವರ ಶ್ರೀಮಠದಲ್ಲಿ ಪುರಾಣ ಇಂದಿನಿಂದ

■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಸಮೀಪದ ಜಕ್ಕಲಿ ಗ್ರಾಮದ ಅನ್ನದಾನೇಶ್ವರ ಶ್ರೀಮಠದಲ್ಲಿ ಅ.3ರಿಂದ 21 ದಿನಗಳವರೆಗೆ ಪ್ರತಿದಿನ ಸಂಜೆ 7.30ರಿಂದ ದ್ಯಾಂಪೂರ ಚನ್ನ ಕವಿಗಳ ವಿರಚಿತ 'ಇಲಕಲ್ಲ ವಿಜಯ ಮಹಾಂತೇಶ್ವರ ಮಹಾ ಪುರಾಣ' ಪ್ರಾರಂಭವಾಗುವುದು ಎಂದು ಶ್ರೀಮಠದ ಜಾತ್ರಾ ಸಮಿತಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಹಾಲಕೆರೆ ಅನ್ನದಾನೇಶ್ವರ ಸಂಸ್ಥಾನ ಮಠದ ಶ್ರೀ ಮುಪ್ಪಿನ ಬಸವಲಿಂಗ ಸ್ವಾಮಿಯವರ ದಿವ್ಯ ಸಾನ್ನಿಧ್ಯದಲ್ಲಿ ಹಾಗೂ ಕೃಪಾ ಆಶೀರ್ವಾದದ ಅಪ್ಪಣೆಯ ಮೇರೆಗೆ ಗದಗ ಶ್ರೀ ವೀರೇಶ್ವರ ಪುಣ್ಯಾಶ್ರಮದ ಶ್ರೀ ಪುಟ್ಟರಾಜ ಗವಾಯಿಗಳವರ ಶಿಷ್ಯರಾದ ಅಬ್ಬಿಗೇರಿಯ ವೇ.ಮೂ. ಮಂಜುನಾಥ ಶಾಸ್ತ್ರಿ ಶಿವಪೂಜಿಯವರು ಮಹಾಪುರಾಣ ಪ್ರವಚನ ಹೇಳಲಿದ್ದಾರೆ.

ಗ್ರಾಮದ ಹನುಮಂತಪ್ಪ ಜಂಗಣ್ಣವರ ಹಾರ್ಮೋನಿಯಂ ಸಂಗೀತದೊಂದಿಗೆ ವೀರೇಶ ಶಂ. ಹಿರೇಮಠ ತಬಲಾ ಸಾಥ್ ನೀಡಲಿದ್ದು, ಗ್ರಾಮದ ಹಾಗೂ ಸುತ್ತಮುತ್ತಲಿನ ಸಕಲ ಸದ್ಭಕ್ತರು ಪ್ರತಿದಿನ ಶ್ರೀಮಠಕ್ಕೆ ಆಗಮಿಸಿ ಶ್ರೀಗುರು ಕೃಪೆಗೆ ಪಾತ್ರರಾಗಬೇಕೆಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

## ಸಿಪಿಸಿಯಲ್ಲಿ ಬಸವರಾಜ ಹೊರಟ್ಟಿ ವಿಷಯ ಮಂಡನೆ

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಪಶ್ಚಿಮ ಆಫ್ರಿಕಾದ ಘಾಣಾದಲ್ಲಿ 66ನೇ ಕಾಮನ್‌ವೆಲ್ತ್ ಪಾರ್ಲಿಮೆಂಟ್ ಸಮ್ಮೇಳನ (ಸಿಪಿಸಿ) ಇಂದಿನಿಂದ ಅ.6ರವರೆಗೆ ನಡೆಯಲಿದೆ. ಕರ್ನಾಟಕದ ಪ್ರತಿನಿಧಿಯಾಗಿ ಸಭಾಪತಿ ಬಸವರಾಜ ಹೊರಟ್ಟಿಯವರು ಭಾಗವಹಿಸಿ, 'ಇಂಧನ ಕೊರತೆ ನೀಗಿಸುವಲ್ಲಿ ಪರಿಸರದ ಪಾತ್ರ' ಕುರಿತು ವಿಷಯ ಮಂಡನೆ ಮಾಡಲಿದ್ದಾರೆಂದು ಡಾ.ಬಸವರಾಜ ಧಾರವಾಡ ತಿಳಿಸಿದ್ದಾರೆ. ಲೋಕಸಭಾಧ್ಯಕ್ಷ ಓಂ ಬಿರ್ಲಾರವರ ನೇತೃತ್ವದಲ್ಲಿ ದೇಶದ ವಿವಿಧ ರಾಜ್ಯಗಳ ಸಭಾಧ್ಯಕ್ಷರು, ಸಭಾಪತಿಗಳು, ಈ ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ. ಭವಿಷ್ಯದಲ್ಲಿ ಇಂಧನ ಕೊರತೆ ತಲೆದೋರುವ ಲಕ್ಷಣಗಳಿದ್ದು, ಅತಿಯಾದ ಇಂಧನ



ಬಳಕೆಯಿಂದ ಪರಿಸರದ ಮೇಲೆ, ಜನಸಾಮಾನ್ಯರ ಆರೋಗ್ಯದ ಮೇಲೆ ಸಾಕಷ್ಟು ದುಷ್ಪರಿಣಾಮ ಉಂಟಾಗುತ್ತಿವೆ. ಈ ದಿಸೆಯಲ್ಲಿ ಇಂಧನ ಕೊರತೆ ನೀಗಿಸುವಲ್ಲಿ ಪರಿಸರದ ಪಾತ್ರ ಅತ್ಯಂತ ಮಹತ್ವದ್ದು. ಈ ಅಮೂಲ್ಯ ಸಂಗತಿಯ ಕುರಿತು ಘಾಣಾ ಸಮ್ಮೇಳನದಲ್ಲಿ ಸಾಕಷ್ಟು ಚರ್ಚೆಯಾಗಲಿದೆ.

### ಮಹಾತ್ಮ ಗಾಂಧಿ ಅಹಿಂಸೆ ಮೂಲಕವೇ ಜಗತ್ತಿನ ಮೂಲೆ ಮೂಲೆ ತಲುಪಿ ಪೂಜ್ಯರಾದರು

# ದೇಶಕ್ಕೆ ಗಾಂಧಿ ಒಬ್ಬರೇ ಮಹಾತ್ಮ, ಪಿತಾಮಹ



■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ದೇಶಕ್ಕೆ ಗಾಂಧಿ ಒಬ್ಬರೇ ಮಹಾತ್ಮ ಮತ್ತು ಪಿತಾಮಹ. ಯಾವುದೇ ಪ್ರಚಾರದ ಸಾಮಾಗ್ರಿ ಮತ್ತು ತಂತ್ರಜ್ಞಾನ ಇಲ್ಲದೆ ಕೇವಲ ಅಹಿಂಸೆ ಮತ್ತು ತಮ್ಮ ಬದುಕಿನ ಸರಳತೆಯಿಂದಲೇ ಮಹಾತ್ಮಗಾಂಧಿ ವಿಶ್ವದ ಮೂಲೆ ಮೂಲೆಗೆ ತಲುಪಿದರು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ನುಡಿದರು. ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಮತ್ತು ಹಲವು ಇಲಾಖೆಗಳ ಸಹಯೋಗದಲ್ಲಿ ಗಾಂಧಿ ಭವನದಲ್ಲಿ ನಡೆದ ಮಹಾತ್ಮ ಗಾಂಧಿ ಅವರ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಒಮ್ಮೆ ರೈಲಿನಲ್ಲಿ ಮೂರನೇ ದರ್ಜೆಯಲ್ಲಿ ಪ್ರಯಾಣಿಸುತ್ತಿದ್ದರು. ಸಹ ಪ್ರಯಾಣಿಕರು, "ಏಕೆ ಮೂರನೇ ದರ್ಜೆ ಸೀಟಿನಲ್ಲಿ ಪ್ರಯಾಣಿಸುತ್ತಿದ್ದೀರಿ" ಎಂದು ಪ್ರಶ್ನಿಸಿದರು. ಇದಕ್ಕೆ ಉತ್ತರಿಸಿದ ಗಾಂಧಿ ಅವರು, "ನಾಲ್ಕನೇ ದರ್ಜೆ ರೈಲಿನಲ್ಲಿ ಇಲ್ಲ. ಇದ್ದಿದ್ದರೆ ಅಲ್ಲೇ ಪ್ರಯಾಣಿಸುತ್ತಿದ್ದೆ. ಅದು ಇಲ್ಲದ್ದರಿಂದ ಮೂರನೇ ದರ್ಜೆಯಲ್ಲಿ ಪ್ರಯಾಣಿಸುತ್ತಿದ್ದೇನೆ" ಎಂದರು. ಇಷ್ಟು ಸರಳವಾದ ವ್ಯಕ್ತಿತ್ವ ಗಾಂಧಿಯವರದ್ದಾಗಿತ್ತು ಎಂದು ಉದಾಹರಿಸಿದರು.

ನಮ್ಮ ಸರ್ಕಾರ ರೂಪಿಸುತ್ತಿರುವ ಕಾರ್ಯಕ್ರಮಗಳಲ್ಲಿ ಮಹಾತ್ಮಗಾಂಧಿ ಅವರ ಆಶಯಗಳು ಸೇರಿವೆ. ಗಾಂಧಿ ಅವರ ಆಶಯದಂತೆ ಕಟ್ಟ ಕಡೆಯ ವ್ಯಕ್ತಿಗೂ ಬದುಕುವ ಅವಕಾಶಗಳನ್ನು ಸೃಷ್ಟಿಸುವುದು ನಮ್ಮ ಸರ್ಕಾರದ ಗುರಿ ಎಂದರು.

ಕಾನೂನು ಸಚಿವ ಹೆಚ್.ಕೆ.ಪಾಟೀಲ್ ಸೇರಿದಂತೆ ಹಲವು ಗಣ್ಯರು ವೇದಿಕೆಯಲ್ಲಿದ್ದರು.



### ಮಹಾತ್ಮ ಗಾಂಧೀಜಿ ಅವರ 154ನೇ ಜಯಂತಿ ಹಿನ್ನೆಲೆ

# ಪ್ರಬಂಧ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣೆ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ಮಹಾತ್ಮ ಗಾಂಧೀಜಿ ಅವರ 154ನೇ ಜಯಂತಿ ಅಂಗವಾಗಿ ಪ್ರೌಢಶಾಲೆ ವಿಭಾಗ/ ಪದವಿ ಪೂರ್ವ/ ಪದವಿ ಹಾಗೂ ಸ್ನಾತಕೋತ್ತರ ಪದವಿ ವಿಭಾಗಗಳಲ್ಲಿ ಆಯೋಜಿಸಲಾಗಿದ್ದ ಜಿಲ್ಲಾ ಮಟ್ಟದ ಪ್ರಬಂಧ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಪ್ರಥಮ ಸ್ಥಾನಕ್ಕೆ 3,000/– ದ್ವಿತೀಯ ಸ್ಥಾನಕ್ಕೆ 2,000/– ಹಾಗೂ ತೃತೀಯ ಸ್ಥಾನಕ್ಕೆ 1,000 ರೂ.ಗಳ ನಗದು ಬಹುಮಾನ ಹಾಗೂ ಪ್ರಮಾಣ ಪತ್ರವನ್ನು ಕಾರ್ಯಕ್ರಮಕ್ಕೆ ಆಗಮಿಸಿದ ಅತಿಥಿಗಳು ವಿತರಿಸಿದರು.



**ಪ್ರೌಢಶಾಲಾ ವಿಭಾಗದಲ್ಲಿ ವಿಜೇತರು:** ಕು. ಶ್ರೇಯಾ ವೀರಣ್ಣ ಯಾವಗಲ್ ಪ್ರಥಮ ಸ್ಥಾನ, ಕು. ವಾಣಿ ಪ್ರಲ್ಹಾದ ಹೊಸಳ್ಳಿ ದ್ವಿತೀಯ ಸ್ಥಾನ, ಕು.ರೇಣುಕಾ ಉಮೇಶ ಗದಗ ತೃತೀಯ ಸ್ಥಾನ

**ಪದವಿ ಪೂರ್ವ ಶಿಕ್ಷಣ ವಿಭಾಗದಲ್ಲಿ ವಿಜೇತರು:** ಅಂಜಲಿ ಕಿ. ಹಾವನೂರ ಪ್ರಥಮ ಸ್ಥಾನ, ವಿದ್ಯಾ ಶಿ ಗಡ್ಡದ ದ್ವಿತೀಯ ಸ್ಥಾನ, ಗೌರಮ್ಮ ಎಸ್ ಹೊಸಳ್ಳಿ ತೃತೀಯ ಸ್ಥಾನ.

**ಪದವಿ/ಸ್ನಾತಕೋತ್ತರ ಪದವಿ ವಿಭಾಗದಲ್ಲಿ ವಿಜೇತರು:** ಈರಮ್ಮ ಕುಂದಗೋಳ ಪ್ರಥಮ ಸ್ಥಾನ, ಚಂದ್ರಗೌಡ ಹನಮಂತಗೌಡ ದ್ವಿತೀಯ ಸ್ಥಾನ ಹಾಗೂ ಮಲ್ಲಿಕಾರ್ಜುನ ಪೂಜಾರ ತೃತೀಯ ಸ್ಥಾನ.

## ಸಾಕ್ಷಿ ಸುಭಾಷಿತ

**ಸಾಧ್ಯವಾದರೆ ಹತ್ತು ಜನರಿಗೆ ನೆರವಾಗು, ಆಗದಿದ್ದರೆ ಹಾದಿಯಲ್ಲಿ ಕಾಣುವ ಗಾಜಿನ ಚೂರನ್ನಾದರೂ ಹೆಕ್ಕಿ ಕಸದ ತೊಟ್ಟಿಗೆ ಹಾಕು.**

**–ಕಣ್ಣದಾಸನ್**

## ಸಂಪಾದಕೀಯ

### ಘೋಷಣೆಗೆ ಸೀಮಿತವಾಗದಿರಲಿ ಅರಣ್ಯೀಕರಣ

ರಾಜ್ಯದಲ್ಲಿ ಕಳೆದ ಮೂರು ತಿಂಗಳಲ್ಲಿ ನಾಲ್ಕು ಸಾವಿರ ಎಕರೆ ಅರಣ್ಯ ವೃದ್ಧಿಯಾಗಿದೆ. 2000ಕ್ಕೂ ಹೆಚ್ಚು ಎಕರೆ ಒತ್ತುವರಿಯನ್ನ ತೆರವುಗೊಳಿಸಿ ಅರಣ್ಯ ಎಂದು ಘೋಷಿಸಲಾಗಿದೆ.

ಈ ಕುರಿತು ಅರಣ್ಯ ಸಚಿವ ಈಶ್ವರ ಖಂಡ್ರೆ ಅವರೇ ಮಾಹಿತಿ ನೀಡಿದ್ದಾರೆ. ವನ್ಯಜೀವಿ ಸಪ್ತಾಹದ ಭಾಗವಾಗಿ ಬೆಂಗಳೂರಿನಲ್ಲಿ ನಡೆಯುತ್ತಿರುವ ಕಾರ್ಯಕ್ರಮ ಒಂದರಲ್ಲಿ ಅಧಿಕೃತ ಮಾಹಿತಿ ಹಂಚಿಕೊಂಡಿರುವ ಈಶ್ವರ ಖಂಡ್ರೆ, ಅರಣ್ಯೀಕರಣ ಹೆಚ್ಚಿಸುವ ಕುರಿತು ತಾವು ಕೈಗೊಂಡಿರುವ ಕಾರ್ಯಕ್ರಮಗಳ ಪಟ್ಟಿಯನ್ನು ಮುಂದೆ ಇಟ್ಟಿದ್ದಾರೆ. ಮುಖ್ಯವಾಗಿ ಐದು ಕೋಟಿ ಸಸಿ ನೆಡುವ ಗುರಿಯನ್ನು ಹೊಂದಿದ್ದಾರೆ. ಆ ಪೈಕಿ ಈಗಾಗಲೇ ನಾಲ್ಕೂವರೆ ಲಕ್ಷ ಸಸಿಗಳನ್ನು ನೀಡಲಾಗಿದೆ. ಅವುಗಳಿಗೆ ಜಿಯೋ ಟ್ಯಾಕಿಂಗ್ ಸಹ ಮಾಡಲಾಗಿದ್ದು ಅವುಗಳ ಬೆಳವಣಿಗೆ ಬಗ್ಗೆ ಅಧಿಕೃತ ಮಾಹಿತಿ ಲಭ್ಯವಾಗಲಿದೆ. ಐದು ಕೋಟಿ ಸಸಿಗಳನ್ನು ನೆಟ್ಟು ಬೆಳೆಸುವ ಕುರಿತಾಗಿ ಮೂರನೇ ವ್ಯಕ್ತಿಯಿಂದ ಆಡಿಟ್ ಸಹ ಮಾಡಿಸುವ ಮುಂದಾಲೋಚನೆಯನ್ನು ಅರಣ್ಯ ಸಚಿವರು ಹೊಂದಿದ್ದಾರೆ.

ಅರಣ್ಯೀಕರಣ ಹೆಚ್ಚಿಸುವ ನಿಟ್ಟಿನಲ್ಲಿ ಅರಣ್ಯ ಇಲಾಖೆ, ಸಚಿವರು ಕೈಗೊಂಡಿರುವ ಕಾರ್ಯ ಅತ್ಯಂತ ಉಪಯುಕ್ತವಾಗಿದೆ. ಜಾಗತಿಕ ತಾಪಮಾನ ಹಾಗೂ ಹವಾಮಾನ ವೈಪರಿತ್ಯಗಳನ್ನ ಸರಿದೂಗಿಸಲು ಅರಣ್ಯೀಕರಣ ಹೆಚ್ಚಿಸುವುದು ಅನಿವಾರ್ಯ ಮತ್ತು ಅಗತ್ಯವಾಗಿದೆ.

ಒಟ್ಟಾರೆ ಭೌಗೋಳಿಕ ಪ್ರದೇಶದ 21% ಅರಣ್ಯ ಇರಬೇಕು. ರಾಜ್ಯದಲ್ಲಿ ಆ ಪ್ರಮಾಣ ಬಹಳಷ್ಟು ಕಡಿಮೆ ಇದೆ. ಅದರಲ್ಲೂ ಉತ್ತರ ಕರ್ನಾಟಕ ಭಾಗದಲ್ಲಿ ಶೇಕಡ 7ಕ್ಕಿಂತ ಕಡಿಮೆ ಪ್ರಮಾಣದಲ್ಲಿ ಇರುವುದು ಆತಂಕಕಾರಿ ವಿಷಯ. ಈ ನಿಟ್ಟಿನಲ್ಲಿ ಆರಂಭಿಕವಾಗಿ ನಾಲ್ಕು ಸಾವಿರ ಎಕರೆ ಅರಣ್ಯ ಪ್ರದೇಶವನ್ನು ಹೆಚ್ಚಿಸಿರುವುದು ಒಳ್ಳೆಯದೆ. ಸರ್ಕಾರಿ ಭೂಮಿಯನ್ನು ಒತ್ತುವರಿ ತೆರುವು ಮಾಡಿ ಅರಣ್ಯದಿಂದ ಘೋಷಣೆ ಮಾಡಿರುವುದು ಸಹ ಒಳ್ಳೆಯ ಕೆಲಸ. ಆದರೆ ಇದು ಕೇವಲ ಭಾಷಣಕ್ಕೆ ಸೀಮಿತವಾಗದಿರಲಿ. ಸರ್ಕಾರಿ ಕಡತಗಳಲ್ಲಿ ಮಾತ್ರ ಅರಣ್ಯ ಎಂದು ನಮೂದಾಗುವುದಕ್ಕಿಂತ ವಾಸ್ತವದಲ್ಲಿ ಅಲ್ಲಿ ಅರಣ್ಯ ಬೆಳೆಯುವಂತಾಗಲಿ. ಸಸಿ ನೆಡುವುದಕ್ಕಿಂತ ಅವುಗಳ ಪೋಷಣೆಗೆ ಹೆಚ್ಚು ಆದ್ಯತೆ ಸಿಗಲಿ. ಮುಖ್ಯವಾಗಿ ವೈಜ್ಞಾನಿಕವಾಗಿ ಸಸಿ ನೆಟ್ಟು ಬೆಳೆಸುವ ಕಾರ್ಯವನ್ನು ಕೈಗೊಳ್ಳುವಂತಾಗಲಿ. ಅಂದಾಗ ಮಾತ್ರ ಅಲ್ಪ ಪ್ರಮಾಣದಲ್ಲಾದರೂ ಕರ್ನಾಟಕದ ಅರಣ್ಯ ವೃದ್ಧಿಯಾಗುವುದು ನಿಶ್ಚಿತ.

ಅರಣ್ಯ ಬೆಳಸುವ ಕಾರ್ಯವನ್ನು ಕೇವಲ ಅರಣ್ಯ ಇಲಾಖೆಗೆ ಅಷ್ಟೇ ಸೀಮಿತಗೊಳಿಸದೆ, ಅದೊಂದು ಜನಾಂದೋಲನವಾಗಿ ಬದಲಾಯಿಸುವ ಕಾರ್ಯಕ್ರಮ ಜಾರಿಯಾಗುವುದು ಅವಶ್ಯಕವಾಗಿದೆ.



ಕರ್ನಾಟಕ ರಾಜ್ಯ ಸರಕಾರಿ ನೌಕರ ಸಂಘ ರವಿವಾರ ಕೊಪ್ಪಳದಲ್ಲಿ ಕರ್ನಾಟಕ ರಾಜ್ಯ ಸರಕಾರಿ ನೌಕರ ಸಂಘದ ಬೈಲಾ ಉಪವಿಧಿಗಳು–2022ರ ಕೆಲ ಉಪವಿಧಿಗಳ ತಿದ್ದುಪಡಿಗಾಗಿ ಕರೆದ ರಾಜ್ಯ ವಿಶೇಷ ಸಭೆಯಲ್ಲಿ ಸಂಘದ ರಾಜ್ಯ ಉಪಾಧ್ಯಕ್ಷ ರವಿ ಎಲ್.ಗುಂಜೀಕರ ಅವರ ನೇತೃತ್ವದಲ್ಲಿ ಸಂಘದ ಸದಸ್ಯರು, ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ನೌಕರ ಬಾಂಧವರು ಪ್ರಯಾಣ ಕೈಗೊಂಡರು. ಈ ಸಂದರ್ಭದಲ್ಲಿ ಸಂಘದ ಗೌರವಾಧ್ಯಕ್ಷ ಡಾ. ಬಸವರಾಜ ಬಳ್ಳಾರಿ, ಕೋಶಾಧ್ಯಕ್ಷ ಡಾ. ಸತೀಶ ಕಟ್ಟಿಮನಿ ಸೇರಿದಂತೆ ಹಲವರಿದ್ದರು.

ಬೆಟಗೇರಿಯ ಹಯಿಲಗೋಳ ರಸ್ತೆಯ ಗೌರಿ ಗಣೇಶ ಪ್ರಾಥಮಿಕ ಶಾಲೆಯಲ್ಲಿ ಮಹಾತ್ಮ ಗಾಂಧಿ ಹಾಗೂ ಲಾಲ್‌ಬಹದ್ದೂರ ಶಾಸ್ತ್ರಿ ಅವರ ಜನ್ಮದಿನವನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಶಾಲಾ ಶಿಕ್ಷಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



**ಬೆಳಗಾವಿಯ 'ಭಕ್ತಿ ಸಾಹಿತ್ಯೋತ್ಸವ'ದಲ್ಲಿ ಡಾ.ಪಂ.ಪುಟ್ಟರಾಜ ಸಾಹಿತ್ಯ ಪುರಸ್ಕಾರ ಪ್ರಶಸ್ತಿ ಪ್ರದಾನ**

# ಪಂ. ಪುಟ್ಟರಾಜರು ಕನ್ನಡ ನಾಡು ಕಂಡ ದಿವ್ಯ ಮಾಣಿಕ್ಯ

**■ ವಿಜಯಸಾಕ್ಷಿ ಸುದ್ದಿ, ಬೆಳಗಾವಿ**

ಪುಟ್ಟರಾಜರು ಕನ್ನಡ ನಾಡು ಕಂಡ ಅಪರೂಪದ ಮಾಣಿಕ್ಯವಾಗಿದ್ದರು. ಕಣ್ಣಿದ್ದವರಿಗೂ ಅಸಾಧ್ಯವಾದ ದಿವ್ಯ ದೃಷ್ಟಿ ಹೊಂದಿದ್ದರು. ಭೌತಿಕ ಅಂಧತ್ವವನ್ನ ಮೀರಿ, ಸಾವಿರಾರು ಅಂಧರ ಬೆಳಕಾಗಿ, ಅವರನ್ನು ಸ್ವಾವಲಂಬಿಗಳನ್ನಾಗಿ ಮಾಡಿದರು. ಸಾಹಿತ್ಯ, ಸಂಗೀತಕ್ಕೂ ಅಪಾರ ಸೇವೆ ಸಲ್ಲಿಸಿದ ಅವರು ಕನ್ನಡ, ಹಿಂದಿ, ಸಂಸ್ಕೃತ ಸೇರಿ 85ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿರುವುದು ಸಾಮಾನ್ಯ ಸಂಗತಿಯಲ್ಲ. ಅಂತಹವರ ಹೆಸರಿನಲ್ಲಿ 23 ವರ್ಷಗಳಿಂದ ಸಾಹಿತ್ಯ ಪುರಸ್ಕಾರ ನೀಡುತ್ತಾ ಬಂದಿರುವ ಸೇವಾ ಸಮಿತಿಯ ಕಾರ್ಯ ಶ್ಲಾಘನೀಯವಾಗಿದೆ ಎಂದು ಕಾರಂಜಿ ಮಠದ ಮ.ನಿ.ಪ್ರ. ಗುರುಸಿದ್ಧ ಮಹಾಸ್ವಾಮಿಗಳು ಅಭಿಪ್ರಾಯಪಟ್ಟರು.

ಗದುಗಿನ ಡಾ. ಪಂ. ಪುಟ್ಟರಾಜ ಸೇವಾ ಸಮಿತಿಯು ರವಿವಾರ ಬೆಳಗಾವಿಯ ಸರಸ್ವತಿ ವಾಚನಾಲಯದಲ್ಲಿ ಆಯೋಜಿಸಿದ್ದ 'ಪದ್ಮಭೂಷಣ ಡಾ. ಪಂ. ಪುಟ್ಟರಾಜ ಶಿವಯೋಗಿ ಭಕ್ತಿ ಸಾಹಿತ್ಯೋತ್ಸವ–23' ಉಧ್ಘಾಟನಾ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.



ಪುಟ್ಟರಾಜ ಸಾಹಿತ್ಯ ಪುರಸ್ಕಾರ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಡಾ. ದಯಾನಂದ ನೂಲಿ, ಶರಣ ಚಿಂತನೆಗಳು ಸಾರ್ವಕಾಲಿಕ ಮತ್ತು ಸಾವತ್ರಿಕ ಮಹತ್ವ ಹೊಂದಿದ್ದು, ಅಧನಿಕ ಧಾವಂತದ ಬದುಕಿಗೆ ಏಕಮೇವ ಪರಿಹಾರಗಳಾಗಿವೆ. ಹಲವು ಹಿರಿಯರ ಪ್ರೇರಣೆ, ಪ್ರೋತ್ಸಾಹದಿಂದ ಈ ಕೃತಿಯ ರಚನೆ ಸಾಧ್ಯವಾಯಿತು.

ನನ್ನ ಶ್ರಮವನ್ನು ಗುರುತಿಸಿ ಪಂ. ಪುಟ್ಟರಾಜ ಸಾಹಿತ್ಯ ಪುರಸ್ಕಾರ ನೀಡಿ ಗೌರವಿಸಿದ ಸೇವಾ ಸಮಿತಿಯ ಪದಾಧಿಕಾರಿಗಳಿಗೆ ತುಂಬು ಹೃದಯದ ಧನ್ಯವಾದಗಳು ಎಂದರು.

ಮುಖ್ಯ ಅತಿಥಿ, ಶರಣ ಮಹಾಂತೇಶ ಗಂಗಪ್ಪಣ್ಣ ತಾಂವಶಿಯವರು ಮಾತನಾಡಿ, ಸೇವಾ ಸಮಿತಿಯು ಹಮ್ಮಿಕೊಳ್ಳುವ ಸೇವೆಗಳಲ್ಲಿ ನಮ್ಮ ಸಹಕಾರ ಇರುತ್ತದೆ ಎಂದು ಹೇಳಿದರು. ಪೂಜ್ಯಶ್ರೀ ಶಿವಪಂಚಾಕ್ಷರಿ ಸ್ವಾಮಿಗಳು ಜಗದ್ಗುರು ದುರದುಂಡೇಶ್ವರ ಶಾಖಾಮಠ ವೇದಿಕೆಯಲ್ಲಿ ಇದ್ದರು. ದಾವಣಗೆರೆ ಶಿವಬಸಯ್ಯ ಚರಂತಿಮಠ ಪೂಜ್ಯರ ಕುರಿತು ಉಪನ್ಯಾಸ ನೀಡಿದರು.

ಡಾ. ಪಂ. ಪುಟ್ಟರಾಜ ಸಾಹಿತ್ಯ ಪುರಸ್ಕಾರ ರಾಜ್ಯ ಪ್ರಶಸ್ತಿ ಪುರಸ್ಕೃತ 'ಮರುಳಶಂಕರದೇವರು ಅನುಭಾವ ಯಾತ್ರೆ' ಕೃತಿಯ ಕರ್ತೃ ಚಿಕ್ಕೋಡಿಯ ಖ್ಯಾತ ವೈದ್ಯ ಡಾ. ದಯಾನಂದ ಈ. ನೂಲಿ ಇವರಿಗೆ ರಾಜ್ಯ ಪ್ರಶಸ್ತಿ ಪ್ರದಾನಿಸಿ ಗೌರವಿಸಲಾಯಿತು. ಪ್ರಶಸ್ತಿ ಪುರಸ್ಕೃತ ಕೃತಿ ಕುರಿತು, ಯರಗಟ್ಟಿಯ ಸರಕಾರಿ ಪ್ರಥಮದರ್ಜೆ ಕಾಲೇಜು ಸಹ ಪ್ರಾಧ್ಯಾಪಕ, ಸಾಹಿತಿ ಡಾ. ರಾಜಶೇಖರ ಬಿರಾದಾರ ಕೃತಿ ಅಂತರಂಗವನ್ನು ತೆರೆದಿಟ್ಟರು.

ಡಾ. ಸುಮಾ ಹಡಪದ ಹಳಿಯಾಳ, ಪಂ. ರಾಜಪ್ರಭು ಧೋತ್ರೆ ಬೆಳಗಾವಿ, ವಿದ್ಯಾ ಮಗದುಮ ಗೋಕಾಕ ಇವರುಗಳ ವಚನ ಭಕ್ತಿಗೀತ ಸಂಗೀತ ನಡೆಯಿತು.

ವಾಮನ್ ವಾಗೂಕರ್ ಶಿವಾಜಿ ಜಾಧವ ದಿನೇಶ ಜುಗುಳಿ ಸಾಥ ನೀಡಿದರು.

ಉಮಾ ಸಂಗೀತ ಪ್ರತಿಷ್ಠಾನ ಕಲಾವಿದರು ಪ್ರಾರ್ಥಗೀತೆ ಹಾಡಿದರು. ಡಾ. ಪಂ. ಪುಟ್ಟರಾಜ ಸೇವಾ ಸಮಿತಿ ಸಂಸ್ಥಾಪಕ ರಾಜ್ಯಾಧ್ಯಕ್ಷ ವೇ. ಚನ್ನವೀರಸ್ವಾಮಿಗಳು ಹಿರೇಮಠ (ಕಡಣಿ) ಪ್ರಾಸ್ತಾವಿಕವಾಗಿ ಮಾತನಾಡಿ, ಸೇವಾ 6ನೆಯ ಭಕ್ತಿ ಸಾಹಿತ್ಯ ಸಮ್ಮೇಳನವನ್ನು ಮುಂದಿನ ವರ್ಷ ಅದ್ದೂರಿಯಾಗಿ ಹಮ್ಮಿಕೊಳ್ಳುವುದಾಗಿ ಹೇಳಿದರು. ಗಿರಿಜಾ ಮುಳಗುಂದ ಸ್ವಾಗತಿಸಿದರು. ಶರಣ ಸೋಮಶೇಖರ ಮಗದುಮ್ ನಿರೂಪಿಸಿದರು.

ಸಮಿತಿಯ ರಾಜ್ಯ ಕಾರ್ಯದರ್ಶಿ ಪ್ರೊ. ಮಂಜುಶ್ರೀ ಹಾವಣ್ಣವರ ವಂದಿಸಿದರು.

ಮಧ್ಯಾನದ ನಂತರ ಹಿರಿಯ ಕವಿ, ನಾಟಕಕಾರ ಗೋಕಾಕ ಈಶ್ವರಚಂದ್ರ ಬೆಟಗೇರಿ ಇವರ ಅಧ್ಯಕ್ಷತೆಯಲ್ಲಿ ಭಕ್ತಿ ಗೀತೆ ಗೋಷ್ಠಿ ನಡೆಯಿತು.

## ಯಕಲಾಸಪೂರ ಪ್ರೌಢಶಾಲೆಯಲ್ಲಿ 'ಸ್ವಚ್ಛತಾ ಹಿ ಸೇವಾ'

**■ ವಿಜಯಸಾಕ್ಷಿ ಸುದ್ದಿ, ಮುಂಡರಗಿ**

ಭಾರತವನ್ನು ಸ್ವಚ್ಛ ಮತ್ತು ಕಸ ಮುಕ್ತಗೊಳಿಸಲು ಎಲ್ಲರ ಬದ್ಧತೆಯನ್ನು ಪುನರುಚ್ಚರಿಸುವ ಸಮುದಾಯದ ಸಹಭಾಗಿತ್ವದ ಮೂಲಕ ಜನ ಆಂದೋಲನವನ್ನು ಉತ್ಪಾದಿಸುವ ಗುರಿಯನ್ನು ಹೊಂದಿರುವ ಶ್ರಮದಾನ ಚಟುವಟಿಕೆಗಳನ್ನು ಕೈಗೊಳ್ಳಲು ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿಯವರ ಜನ್ಮ ದಿನಾಚರಣೆಯ ಪೂರ್ವ ದಿನ ಶ್ರೀಮತಿ ಪಾರ್ವತೆವ್ವ ಕೋಂ ಹಿರೆಬಸಪ್ಪ ಹಳೆಮನೆ ಸರಕಾರಿ ಪ್ರೌಢಶಾಲೆ ಯಕಲಾಪೂರದಲ್ಲಿ ಕಸಮುಕ್ತ, ಶುಭ್ರ ವಾತಾವರಣ, ಮನಸ್ಸಿಗೆ ಮುದ ನೀಡುವ, ಕಲಿಕೆಯನ್ನು ಇಮ್ಮಡಿಸುವ ಶಾಲೆಯನ್ನಾಗಿ ವಿದ್ಯಾರ್ಥಿಗಳು ಶಿಕ್ಷಕರು ಹಾಗೂ ಗ್ರಾಮಸ್ಥರನ್ನು ಒಳಗೊಂಡು 'ಸ್ವಚ್ಛತಾ ಹೀ ಸೇವಾ' ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.



ಈ ಸಂದರ್ಭದಲ್ಲಿ ಶಾಲೆಯ ಎಸ್‌ಡಿಎಮ್‌ಸಿ ಅಧ್ಯಕ್ಷ ಚನ್ನಪ್ಪ ಈರಪ್ಪ ಹೊಳೆಯಾಚೆ ಹಾಗೂ ಸರ್ವ ಸದಸ್ಯರು, ಗ್ರಾಮ ಪಂಚಾಯಿತಿ ಸದಸ್ಯರಾದ ಗುರಪ್ಪ ರೋಣದ, ರವಿ ಚೌಡಕಿ, ರೇಷ್ಮಾ ಕನ್ಯಾಳ್, ಮುದುಕಪ್ಪ ಹರಿಜನ, ಶಿಕ್ಷಣ ಪ್ರೇಮಿಗಳಾದ ಸಿದ್ದಪ್ಪ ಉಂಡಂಡಿ, ಮಹೇಶ್ ಹೊಳೆಯಾಚೆ, ಮಾಂತೇಶ್ ಮುಗಳಿ, ಚಿದಾನಂದ ರೋಣದ, ಭೂದಾನಿಗಳಾದ ಮಲ್ಲನಗೌಡ ಹಳೆಮನೆ, ಪ್ರಧಾನ ಗುರುಗಳಾದ ಎಂ.ಡಿ ಮಾದರ್, ಶಿಕ್ಷಕರಾದ ದುರ್ಗಾ ಪ್ರಸಾದ ಡಿ, ಎಂ.ಎಚ್ ಸವದತ್ತಿ, ಅನ್ನದಾನೇಶ್, ದುಂಡಪ್ಪ ಕಾಗವಾಡೆ, ಮಂಜು ಎಚ್.ಎಚ್, ಶರಣಪ್ಪ ಬಲಭಾದಿ, ಬಿ.ಸಿ ಜೋಗಿನ ಉಪಸ್ಥಿತರಿದ್ದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

## ರೋಟರಿ ಸಂಸ್ಥೆಯಿಂದ ನೋಟ್ ಪುಸ್ತಕ ವಿತರಣೆ

**■ ವಿಜಯಸಾಕ್ಷಿ ಸುದ್ದಿ, ಗದಗ**

ರೋಟರಿ ಸಂಸ್ಥೆ ಗದಗ–ಬೆಟಗೇರಿಯಿಂದ ಅಡವಿಸೋಮಾಪುರ ತಾಂಡಾದಲ್ಲಿ ಕಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ನೋಟ್ ಪುಸ್ತಕ, ಪೆನ್–ಪೆನ್ಸಿಲ್‌ಗಳನ್ನು ವಿತರಿಸಿದರು. ಸಂಸ್ಥೆಯ ಅಧ್ಯಕ್ಷ ರೊ. ಚಂದ್ರಮೌಳಿ ಜಾಲಿ ನೋಟ್ ಪುಸ್ತಕ ವಿತರಿಸಿ, ಎಲ್ಲ ಮಕ್ಕಳು ಚೆನ್ನಾಗಿ ಅಭ್ಯಾಸಮಾಡಿ ತಮ್ಮ ಶಿಕ್ಷಕರ ಹಾಗೂ ತಂದೆ–ತಾಯಿಗಳ ಹೆಸರನ್ನು ಉನ್ನತ ಸ್ಥಾನಕ್ಕೆ ಒಯ್ಯಬೇಕೆಂದರು.



ಶಾಲೆಯ ಮುಖ್ಯೋಪಾಧ್ಯಾಯ ಪಿ. ಈರಪ್ಪನವರು ಎಲ್ಲರನ್ನು ಸ್ವಾಗತಿಸಿ, ರೋಟರಿ ಸಂಸ್ಥೆಯವರು ಮಕ್ಕಳಿಗೆ ನೋಟ್ ಪುಸ್ತಕ ಹಂಚಿದ್ದಕ್ಕಾಗಿ ಸಂತೋಷ ವ್ಯಕ್ತಪಡಿಸಿದರು. ಸಂಸ್ಥೆಯ ಕಾರ್ಯದರ್ಶಿ ವೀಣಾ ತಿರ್ಲಾಪೂರ ಎಲ್ಲ ಮಕ್ಕಳಿಗೆ ತಮ್ಮ ಕೈಗಳನ್ನು ಶುಚಿಯಾಗಿ ಇಟ್ಟುಕೊಳ್ಳಬೇಕೆಂದು ಪ್ರಾತ್ಯಕ್ಷಿಕೆಯ ಮೂಲಕ ವಿವರಿಸಿದರು.

ರೋಟರಿ ಸಂಸ್ಥೆಯ ಸದಸ್ಯರಾದ ಶಿವಾಚಾರ್ಯ ಹೊಸಳ್ಳಿಮಠ, ಶ್ರೀಧರ ಸುಲ್ತಾನಪೂರ, ಶಾಲೆಯ ಶಿಕ್ಷಕರಾದ ಬಿ.ಎಸ್ ತಮ್ಮನಗೌಡರ, ವ್ಹಿ.ಎಸ್ ಗುಜಮಾಗಡಿ ಹಾಗೂ ಎಸ್‌ಡಿಎಮ್‌ಸಿ ಉಪಾಧ್ಯಕ್ಷ ಗೋವಿಂದ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## 'ಬಾಪೂಜಿ' ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಿಗೆ ಬಹುಮಾನ

**■ ವಿಜಯಸಾಕ್ಷಿ ಸುದ್ದಿ, ಹರಪನಹಳ್ಳಿ**

ವಿಜಯನಗರ ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ವಿಜಯನಗರ ಇವರ ಸಂಯಕ್ತಾಶ್ರಯದಲ್ಲಿ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ 154ನೇ ಜನ್ಮ ದಿನಾಚರಣೆ ಅಂಗವಾಗಿ ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ಜಿಲ್ಲಾ ಮಟ್ಟದ 'ಬಾಪೂಜಿ' ಪ್ರಬಂಧ ಸ್ಪರ್ಧೆಯಲ್ಲಿ ಭಾಗವಹಿಸಿ ವಿಜೇತರಾದ ವಿದ್ಯಾರ್ಥಿಗಳಿಗೆ ಹೊಸಪೇಟೆಯ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಜಿಲ್ಲಾಧಿಕಾರಿ ಶ್ರೀದಿವಾಕರ್ ಎಂ.ಎಸ್ ಪ್ರಶಸ್ತಿ ಪತ್ರ ಮತ್ತು ನಗದು ಬಹುಮಾನ ವಿತರಿಸಿದರು.



ಪಟ್ಟಣದ ಎಸ್‌ಯುಜೆಎಂ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿನಿ ಗಿರಿಜಾ ಎಸ್.ಎಂ ಇವರು ವಿಜಯನಗರ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದು, ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಇದೇ ಕಾಲೇಜಿನ ವಿದ್ಯಾರ್ಥಿನಿ ದ್ಯಾಪನಾಯಕನಹಳ್ಳಿಯ ಐಶ್ವರ್ಯ ಕೆ ತೃತೀಯ ಸ್ಥಾನ ಪಡೆದಿದ್ದಾರೆ.

ಈ ವಿದ್ಯಾರ್ಥಿನಿಯರಿಗೆ ಜ್ಞಾನಗುರು ವಿದ್ಯಾಪೀಠದ ಕಾರ್ಯದರ್ಶಿ ಎಂಎಂಜೆ ಹರ್ಷವರ್ಧನ, ನಿರ್ದೇಶಕರಾದ ಟಿಹೆಚ್‌ಎಂ ಶಿವಾನಂದ ಸ್ವಾಮಿ, ಎಂ ರಾಜಶೇಖರ, ಕಾಲೇಜಿನ ಪ್ರಾಚಾರ್ಯ ಹೆಚ್ ಮಲ್ಲಿಕಾರ್ಜುನ, ಉಪನ್ಯಾಸಕರಾದ ಹೆಚ್.ಬಿ ಸೋಮರೆಡ್ಡಿ, ಎಸ್ ಚನ್ನಬಸಪ್ಪ, ಬಿ ಕೃಷ್ಣಮೂರ್ತಿ, ಎಸ್ ಕೊಟ್ರೇಶ್, ಟಿ.ಎಂ ಜಯದೀಪ್, ಕೆ ಬೀರಾನಾಯ್ಕ, ಸಿ.ಎಂ ಪ್ರವೀಣ, ಆತ್ಮಾನಂದ ಮುಂದಿನಮನಿ, ಕೆ.ಎಂ ಶೈಲಜಾ, ಬಿ ಸುನೀಲ್ ಮತ್ತು ಪೋಷಕರು ಅಭಿನಂದಿಸಿದ್ದಾರೆ.

## ಪತಂಜಲಿ ಯೋಗ ಸಮಿತಿಯಿಂದ ಸ್ವಚ್ಛ ಭಾರತ ಅಭಿಯಾನ



**■ ವಿಜಯಸಾಕ್ಷಿ ಸುದ್ದಿ, ಗದಗ**

ಗದಗ ಜಿಲ್ಲಾ ಪತಂಜಲಿ ಯೋಗ ಸಮಿತಿ, ಮಹಿಳಾ ಪತಂಜಲಿ ಯೋಗ ಸಮಿತಿ ಆಶ್ರಯದಲ್ಲಿ ಭಾನುವಾರ ಪತಂಜಲಿ ಯೋಗ ಗುರು ರಾಮದೇವ ಗುರೂಜಿಯವರ ನಿರ್ದೇಶನದಂತೆ ನಗರದ ಮುನ್ಸಿಪಲ್ ಮೈದಾನದಲ್ಲಿ ಸ್ವಚ್ಛತಾ ಅಭಿಯಾನ ಅಡಿಯಲ್ಲಿ ಸ್ವಚ್ಛತಾ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಮಹಿಳಾ ಪತಂಜಲಿ ಯೋಗ ಸಮಿತಿ ಜಿಲ್ಲಾ ಪ್ರಭಾರಿಗಳಾದ ಶೋಭಾ ಗುಗ್ಗರಿ, ಕಾರ್ಯದರ್ಶಿ ನಾಗರತ್ನಾ ಬಡಿಗಣ್ಣವರ, ಹಿರಿಯ ಯೋಗ ಶಿಕ್ಷಕಿ ಬಸಮ್ಮ ಡಗಲಿ, ಕೆ.ಎಸ್ ಗುಗ್ಗರಿ, ಸದಾನಂದ ಕಾಮತ, ಗಿರಿಯಪ್ಪ ಮಡಿವಾಳರ, ಅಪ್ಪಣ್ಣ ಮಠದ, ಶಾರದಾ ಕವಲೂರ ಸೇರಿದಂತೆ ಅನೇಕ ಯೋಗ ಸಾಧಕರು, ಸಾಧಕಿಯರು, ಯೋಗಾಸಕ್ತರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

## ತಹಸೀಲ್ದಾರ ಕಚೇರಿಯಲ್ಲಿ ಗಾಂಧೀಜಿ, ಶಾಸ್ತ್ರೀಜಿ ಜಯಂತಿ ಆಚರಣೆ



**■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಅಹಿಂಸೆಯ ಹಾದಿಯಲ್ಲಿ ಕ್ರಮಿಸಿ, ಭಾರತೀಯರ ಮನದಲ್ಲಿ ಸದಾ ಹಚ್ಚ ಹಸಿರಾಗಿರುವ ಗಾಂಧೀಜಿಯವರು ಸ್ವಾತಂತ್ರಕ್ಕಾಗಿ ತಮ್ಮ ಜೀವನವನ್ನೆ ಮುಡುಪಾಗಿಟ್ಟಿದ್ದರು. ನನ್ನವರು, ನನ್ನ ದೇಶ ಎನ್ನುವ ಅವರ ತುಡಿತ, ತತ್ವಾದರ್ಶಗಳು ಸದಾ ಪ್ರಸ್ತುತವಾಗಿವೆ ಎಂದು ಉಪತಹಸೀಲ್ದಾರ ಪ್ರಶಾಂತ ಕಿಮಾಯಿ ಹೇಳಿದರು.

ಅವರು ಸೋಮವಾರ ಪಟ್ಟಣದ ತಹಸೀಲ್ದಾರ ಕಚೇರಿಯಲ್ಲಿ ಗಾಂಧೀಜಿ ಮತ್ತು ಲಾಲ್‌ಬಹದ್ದೂರ ಶಾಸ್ತ್ರೀಯವರ ಜಯಂತಿ ಕಾರ್ಯಕ್ರಮದ ಅಂಗವಾಗಿ ಮಹನೀಯರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಪುಷ್ಪನಮನವನ್ನು ಅರ್ಪಿಸಿ ಮಾತನಾಡಿದರು.

ಸ್ವಾತಂತ್ರ ಹೋರಾಟಕ್ಕೆ ಗಾಂಧೀಜಿಯವರ ಕೊಡುಗೆ ಮಹತ್ತರವಾಗಿದೆ. ಲಾಲ್‌ಬಹದ್ದೂರ ಶಾಸ್ತ್ರೀಜಿಯವರು ಪ್ರಧಾನಮಂತ್ರಿಗಳಾದರೂ ಸಹ ತಮ್ಮ ನಿಷ್ಠೆ, ಪ್ರಾಮಾಣಿಕತೆ, ದಕ್ಷತೆ–ಯ ಮೂಲಕ ವಿಶ್ವದ ಗಮನ ಸೆಳೆದವರು. ಇಂತಹ ಮಹಾನ್ ಪುರುಷರ ಶ್ರಮದ ಪ್ರತೀಕವಾಗಿ ದೇಶ ಸ್ವತಂತ್ರಗೊಂಡು ಪ್ರಸ್ತುತ ವಿಶ್ವಮಾನ್ಯವಾಗಲು ಕಾರಣವಾಗಿದೆ ಎಂದರು.

ಶಿರಸ್ತೆದಾರ ರೇಣುಕಾ ಹರಿಜನ ಮಾತನಾಡಿ, ಅಹಿಂಸಾ ಮಾರ್ಗದಲ್ಲಿ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟಿರುವ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಈ ದೇಶಕ್ಕೆ ನೀಡಿದ ಕೊಡುಗೆ, ಬೋಧನೆ, ಸ್ವಾತಂತ್ರ್ಯ ಹೋರಾಟ, ಸಾಹಿತ್ಯ ಕೊಡುಗೆ, ತತ್ವಗಳು, ಸಿದ್ಧಾಂತಗಳಿಂದ ರಾಷ್ಟ್ರಪಿತನಾಗಿ ಎಲ್ಲರ ಮನದಲ್ಲಿ ಉಳಿದಿದ್ದಾರೆ. ಇಂದು ಅವರ ಜನ್ಮದಿನವನ್ನು ರಾಷ್ಟ್ರೀಯ ಹಬ್ಬವಾಗಿ ಆಚರಿಸುತ್ತಿದ್ದೇವೆ ಎಂದರು.

ಕಾರ್ಯಕ್ರಮದಲ್ಲಿ ಕಂದಾಯ ನಿರೀಕ್ಷಕ ಬಿ.ಎಂ ಕಾತರಾಳ, ತಹಸೀಲ್ದಾರ ಕಚೇರಿಯ ಸಿಬ್ಬಂದಿಗಳಾದ ಪ್ರಶಾಂತ ಸನದಿ, ಸವಿತಾ ಕುಲಕರ್ಣಿ, ಸುಬೇದಖಾನ್ ಪಠಾಣ, ಚಂದ್ರಕಲಾ ಸಣ್ಣಪ್ಪನವರ, ತಸ್ಲಿಂ ಮುಲ್ಲಾ, ಶಬೀನಾಬೇಗಂ ನಧಾಪ್, ಮಂಜುನಾಥ ಜಾಧವ್, ಪಾಥೀಮಾ ಪತ್ತೇಖಾನ್ ಮುಂತಾದವರಿದ್ದರು.

**ವೀರಭದ್ರೇಶ್ವರ ದೇವಸ್ಥಾನದ ಜಾತ್ರಾ ಕಮಿಟಿಯ ನೂತನ ಪದಾಧಿಕಾರಿಗಳ ಆಯ್ಕೆ**

# ಡಿ.13, 14ರಂದು ವೀರಭದ್ರೇಶ್ವರ ಜಾತ್ರಾ ಮಹೋತ್ಸವ



ಇದೇ ಸಂದರ್ಭದಲ್ಲಿ ವೀರಭದ್ರೇಶ್ವರ ಜಾತ್ರಾ ಸಮಿತಿಯ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ಪ್ರದೀಪಗೌಡ ಗುಡದಪ್ಪನವರ, ಉಪಾಧ್ಯಕ್ಷರಾಗಿ ರಂಗಪ್ಪ ಕೋಳಿ, ಕಾರ್ಯದರ್ಶಿಯಾಗಿ ವೀರೇಶ ಗುಗ್ಗರಿ, ಸಹಕಾರ್ಯದರ್ಶಿಯಾಗಿ ಮಂಜುನಾಥ ಕಾಸಿಗವಿ ಹಾಗೂ ಖಜಾಂಚಿಯಾಗಿ ವಿ.ಜೆ ಹಿರೇಮಠ ಅವರು ಅವಿರೋಧವಾಗಿ ಆಯ್ಕೆಯಾದರು. ಪ್ರಸಾದ ಸಮಿತಿ, ಪ್ರಚಾರ ಹಾಗೂ ವೇದಿಕೆ, ವಿವಾಹ ನೋಂದಣಿ, ಉತ್ಸವ ಸಮಿತಿ, ಸಾಧಕರ ಆಯ್ಕೆ ಸಮಿತಿ ಮೊದಲಾದವುಗಳಿಗೆ ನೂತನ ಪದಾಧಿಕಾರಿಗಳನ್ನು ನೇಮಕ ಮಾಡಲಾಯಿತು.

**■ ವಿಜಯಸಾಕ್ಷಿ ಸುದ್ದಿ, ಮುಂಡರಗಿ**

ಪ್ರತೀ ವರ್ಷದಂತೆ ಈ ವರ್ಷ ಡಿಸೆಂಬರ್ 13 ಹಾಗೂ 14ರಂದು ವೀರಭದ್ರೇಶ್ವರ ಜಾತ್ರಾ ಮಹೋತ್ಸವವನ್ನು ಅದ್ದೂರಿಯಾಗಿ ಆಚರಿಸಲಾಗುವುದು.

ಜಾತ್ರೆಯ ಅಂಗವಾಗಿ ಹಲವಾರು ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ವೀರಭದ್ರೇಶ್ವರ ಸೇವಾ ಸಮಿತಿ ಅಧ್ಯಕ್ಷ ಸಂಗಣ್ಣ ಲಿಂಬಿಕಾಯಿ ತಿಳಿಸಿದರು.

ಪಟ್ಟಣದ ವೀರಭದ್ರೇಶ್ವರ ದೇವಸ್ಥಾನದಲ್ಲಿ ಹಮ್ಮಿಕೊಂಡಿದ್ದ ವೀರಭದ್ರೇಶ್ವರ ಸೇವಾ ಸಮಿತಿಯ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಜಾತ್ರಾ ಮಹೋತ್ಸವದಲ್ಲಿ ದೇವಸ್ಥಾನದ ನೂತನ ಗೋಪುರ ಲೋಕಾರ್ಪಣೆ, ಉಚಿತ ಸಾಮೂಹಿಕ ವಿವಾಹ, ಶ್ರೀವೀರಭದ್ರೇಶ್ವರ ಪ್ರತಿಷ್ಠಾನ ಪುರಸ್ಕಾರ, ದೀಪೋತ್ಸವ, ಉಚಿತ ಆರೋಗ್ಯ ತಪಾಸಣಾ ಶಿಬಿರ ಇನ್ನಿತರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ವೀರಭದ್ರೇಶ್ವರ ದೇವಸ್ಥಾನದ ಗೋಪುರ ಕಾಮಗಾರಿ ಪೂರ್ಣಗೊಂಡಿದ್ದು, ಮುಂದಿನ ವರ್ಷ ಭದ್ರಮಹಾಂಕಾಳಿ ಗೋಪುರ ನಿರ್ಮಾಣ ಕಾರ್ಯ ಕೈಗೊಳ್ಳಲಾಗುವುದು. ಜಾತ್ರಾ ಮಹೋತ್ಸವದಲ್ಲಿ ಉಚಿತ ಸಾಮೂಹಿಕ ವಿವಾಹ ಹಮ್ಮಿಕೊಳ್ಳಲಾಗಿದೆ. ಪ್ರಸ್ತುತ ವರ್ಷದಿಂದ ಸಾಧಕರೊಬ್ಬರನ್ನು ಗುರುತಿಸಿ ಅವರಿಗೆ ಪುರಸ್ಕಾರ ನೀಡಲಾಗುವುದು ಎಂದು ಮಾಹಿತಿ ನೀಡಿದರು. ವೀರಭದ್ರೇಶ್ವರ ಮಹಿಳಾ ವೇದಿಕೆ ಅಧ್ಯಕ್ಷೆ ಪ್ರಭಾವತಿ ಕುಬಸದ ಮಾತನಾಡಿ, ನವರಾತ್ರಿ ಹಬ್ಬದ ಪ್ರಯುಕ್ತ ದೇವಸ್ಥಾನದಲ್ಲಿ ಉಚಿತ ಆರೋಗ್ಯ ತಪಾಸಣೆ, ಉಚಿತ ರಕ್ತ ತಪಸಣೆ ಹಾಗೂ ಉಚಿತ ರಕ್ತದಾನ ಶಿಬಿರಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

ವಿ.ಆರ್ ಹಿರೇಮಠ ಅಧ್ಯಕ್ಷತೆ ವಹಿಸಿದ್ದರು. ಗುಡದಪ್ಪ ಲಿಂಬಿಕಾಯಿ, ವೀರೇಶ ಸಜ್ಜನರ, ರವೀಂದ್ರಗೌಡ ಪಾಟೀಲ, ಎಸ್.ಪಿ ಕೊಪ್ಪಳ, ವೀರಣ್ಣ ಕರ್ಜಗಿ, ಎಂ.ಬಿ ಗದಗ, ನಂಜುಂಡೇಶ ಲಿಂಬಿಕಾಯಿ, ಮಹಾಂತೇಶ ಕೊರಡಕೇರಿ, ಈರಣ್ಣ ಕಾಸಿಗವಿ, ದೀಪಾ ಕುರಡಗಿ, ವಿಜಯಲಕ್ಷ್ಮೀ ಲಿಂಬಿಕಾಯಿ, ಲತಾ ಲಿಂಬಿಕಾಯಿ, ಲತಾ ಕಡ್ಡಿ, ಕಲ್ಪನಾ ಕಡ್ಡಿ ಇದ್ದರು.

# ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಜಗತ್ತು ಕಂಡ ಅಪರೂಪದ ವ್ಯಕ್ತಿ

▸▸ಮೊದಲನೇ ಪುಟದಿಂದ

ಬಡ ಕುಟುಂಬದಲ್ಲಿ ಜನಿಸಿದವರು. ಮೊಗಲಸಾರಾಯಿ ಎಂಬಲ್ಲಿ ಶಾರದಾ ಪ್ರಸಾದ ಶ್ರೀವಾತ್ಸವ ಹಾಗೂ ರಾಮದುಲಾರಿಯವರ ಮಗನಾಗಿ ಹುಟ್ಟಿದರು. ವಿದ್ಯಾಪೀಠದಿಂದ ಇವರಿಗೆ ಶಾಸ್ತ್ರೀ ಎಂಬ ಪದವಿ ಬಂದಿತು. ಶಾಸ್ತ್ರೀಜಿಯವರು ದೇಶಕ್ಕೆ ಸ್ವಾತಂತ್ರ್ಯ ತಂದುಕೊಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಶಾಸ್ತ್ರೀಜಿಯವರು ಸತ್ಯ, ನಿಷ್ಠೆ, ಪ್ರಾಮಾಣಿಕತನದಿಂದ ಆಡಳಿತ ನಡೆಸಿದವರು. ಇಂಡೋ ಪಾಕ್ ಯುದ್ಧವಾದಾಗ ಭಾರತ ದೇಶವು ಜಯ ಗಳಿಸಿತು ಎಂದು ವಿವರಿಸಿದರು.

ಕಾರ್ಯಕ್ರಮದಲ್ಲಿ ಜರುಗಿದ ಸರ್ವಧರ್ಮ ಪ್ರಾರ್ಥನೆಯಲ್ಲಿ ಸುಮನ್ ಕುಲಕರ್ಣಿ ಭಗವದ್ಗೀತೆ ಅಧ್ಯಾಯವನ್ನು ಪಠಿಸಿದರು. ಕುಮಾರಿ ಮುಸ್ಕಾನ್ ಕುರಾನ್ ಮತ್ತು ಕುಮಾರಿ ಸವಿನಯ ಬೈಬಲ್ ಪಠಿಸಿದರು. ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ಸರ್ವರನ್ನು ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಸಮಾರಂಭದಲ್ಲಿ ಗದಗ ಬೆಟಗೇರಿ ನಗರಸಭೆ ಅಧ್ಯಕ್ಷೆ ಉಷಾ ದಾಸರ, ಉಪಾಧ್ಯಕ್ಷೆ ಸುನಂದಾ ಬಾಕಳೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್.ನೇಮಗೌಡ, ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ ಎಂ, ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಸಿ.ಆರ್. ಮುಂಡರಗಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ರವಿ ಗುಂಜೀಕರ್, ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎಂ.ಎ. ರಡ್ಡೇರ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕ ವಸಂತ ಬ ಮಡ್ಲೂರ, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಮಹಾಂತೇಶ ಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ವೀರಯ್ಯ ಸ್ವಾಮಿ ಬಿ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು, ಶಾಲಾ ಕಾಲೇಜು ವಿದ್ಯಾರ್ಥಿಗಳು ಹಾಜರಿದ್ದರು.

ನಾಡಗೀತೆಯೊಂದಿಗೆ ಪ್ರಾರಂಭವಾದ ಕಾರ್ಯಕ್ರಮದಲ್ಲಿ ಬಾಹುಬಲಿ ಜೈನರ ಕಾರ್ಯಕ್ರಮ ನಿರೂಪಿಸಿ ಕೊನೆಗೆ ವಂದಿಸಿದರು.

### ಸ್ವಾತಂತ್ರ್ಯ ಹೋರಾಟಗಾರ ಭಗತಸಿಂಗ್‌ರ 116ನೇ ಜಯಂತಿ ಪ್ರಯುಕ್ತ ಬೈಕ್ ರ್ಯಾಲಿ

# ಹೋರಾಟಗಾರರ ಇತಿಹಾಸ ಯುವಕರಿಗೆ ಸ್ಫೂರ್ತಿಯಾಗಲಿ

■ ವಿಜಯಸಾಕ್ಷಿ ಸುದ್ದಿ, ಗದಗ

ಸ್ವಾತಂತ್ರ್ಯ ಹೋರಾಟಗಾರ ಭಗತಸಿಂಗ್ ಅಭಿಮಾನಿ ಬಳಗದ ಗದಗ ಜಿಲ್ಲೆ ವತಿಯಿಂದ ಭಗತಸಿಂಗ್‌ರ 116ನೇ ಜಯಂತಿ ಪ್ರಯುಕ್ತ ಬೈಕ್ ರ್ಯಾಲಿ ಹಮ್ಮಿಕೊಳ್ಳಲಾಗಿತ್ತು. ರ್ಯಾಲಿಗೆ ಮಾಜಿ ಸೈನಿಕರು ಮತ್ತು ಪೊಲೀಸ್ ಇಲಾಖೆಯವರು ಓಣಿಯ ಗುರುಹಿರಿಯರು ಚಾಲನೆ ನೀಡಿದರು.

ಮುಳಗುಂದ ನಾಕಾ ಕೆಇಬಿ ಹತ್ತಿರ ಇರುವ ಭಗತಸಿಂಗ್ ವೃತ್ತದಿಂದ ರ್ಯಾಲಿ ಪ್ರಾರಂಭವಾಗಿ ಒಕ್ಕಲಗೇರಿ ಓಣಿ, ಸರ್ದಾರ ವಲ್ಲಭಾಯಿಪಟೇಲ ರಸ್ತೆ, ಹಳೆವೆಂಕಟೇಶ್ವರ ದೇವಸ್ಥಾನ ಮಾರ್ಗವಾಗಿ, ಪ. ಪುಟ್ಟರಾಜ ಗವಾಯಿಗಳ ಬಸ್ ನಿಲ್ದಾಣ, ಹೂವಿನ ಮಾರ್ಕೆಟ್ ಟಾಂಗಾ–ಕೂಟ, ಬಸವೇಶ್ವರ ಸರ್ಕಲ್‌ನಿಂದ ಒಕ್ಕಲಗೇರಿ ಓಣಿಯಲ್ಲಿರುವ ಶ್ರೀ ರಾಚೋಟಿ ವೀರಭದ್ರೇಶ್ವರ ದೇವಸ್ಥಾನ ಅವರಣದಲ್ಲಿ ಮುಕ್ತಾಯಗೊಂಡಿತು.

ನಂತರ, ದೇವಸ್ಥಾನದಲ್ಲಿ ರಕ್ತದಾನ, ನೇತ್ರದಾನ ಸಂಕಲ್ಪ




ಶಿಬಿರ ನೆರವೇರಿತು. ನೂರಾರು ಯುವಕರು, ದೇಶಪ್ರೇಮಿಗಳು, ಭಗತಸಿಂಗ್ ಅಭಿಮಾನಿಗಳು ರಕ್ತದಾನ, ನೇತ್ರದಾನ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಬಳಗದ ಜಿಲ್ಲಾ ಪ್ರಮುಖ ಮಂಜು ಮುಳಗುಂದ, ದೇಶದ ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರ ವಿರುದ್ಧ ಕ್ರಾಂತಿಕಾರಿ ಹೋರಾಟ ನಡೆಸಿ, ಅತಿ ಚಿಕ್ಕ ವಯಸ್ಸಿನಲ್ಲಿ ಪ್ರಾಣತ್ಯಾಗ ಮಾಡಿದ ಮಹಾನ್ ಕ್ರಾಂತಿಕಾರಿ ಭಗತ್‌ಸಿಂಗ್. ಇವರಂತೆ ಇನ್ನೂ ಅನೇಕ ಹೋರಾಟಗಾರ ಇತಿಹಾಸ ಈಗಿನ ಯುವಕರಿಗೆ ಸ್ಫೂರ್ತಿಯಾಗಬೇಕು. ಭಗತ್‌ಸಿಂಗ್, ರಾಜಗುರು ಸುಖದೇವರ ಜಯಂತಿಯನ್ನು ಸರ್ಕಾರದಿಂದಲೇ ಆಚರಿಸಬೇಕು. ಅಂದಾಗಲೇ ಯುವಕರಲ್ಲಿ ದೇಶಭಕ್ತಿ ಜಾಗೃತವಾಗಲು ಸಾಧ್ಯವಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ಮಾಜಿ ಸೈನಿಕರಾದ ಒಲಿಸರ ಸಂಗಪ್ಪ ಗೊಂದಿ, ಸಂಘಟನೆಯ ಪ್ರಮುಖರಾದ ಮಂಜುನಾಥ ಹಿತ್ತಲಮನಿ, ರವಿ ಹುಡೇದ, ಪರಶುರಾಮ ಹೆಬ್ಬಳ್ಳಿ, ದೇವಪ್ಪ ಲಕ್ಕುಂಡಿ, ಮಂಜು ಹುಡೆದ, ಅವಿನಾಶ್ ಕಳಸನವರ್, ಅಕ್ಷಯ್ ಜಕ್ಕನಗೌಡ್ರ, ಮಾಂತೇಶ್ ಬಿಂಕದಕಟ್ಟೆ, ರವಿ ಬ್ಯಾಹಟ್ಟಿ, ಬಸವರಾಜ್ ಹುಲ್ಲೂರು, ವೀರೇಶ್ ಹಿರಿಯವಡ್ಡಟ್ಟಿ, ಮಂಜುನಾಥ ಉದ್ದಾರ, ನಾಗರಾಜ್ ಜೈ ಕರ್ನಾಟಕ, ಪ್ರವೀಣ ಮೂರಸಾಲಿ, ಗಿರೀಶ ಯಲಬುರ್ಗಿ, ಶ್ರೀಕಾಂತ ನಾಗನೂರ, ಸತೀಶ್ ಕೊಟಗಿ, ನಿಂಗರಾಜ ಕೊನ್ನೂರ, ಪ್ರಕಾಶ ಹಾವನೂರ, ದೀಪಕ, ಮುನವಳ್ಳಿ, ಉದಯ, ಪ್ರಸನ್ನ ಈಶ್ವರ ಗಂಗಿಮಡಿ, ಶಿವಾನಂದ, ಅಮಿತ, ಮಾಂತೇಶ, ವಿಜಯ, ಪುಟ್ಟು ಹುಲಕೋಟಿ, ಕಿರಣ, ಈಶ್ವರ, ವಿನಾಯಕ, ಸುನೀಲ, ಸಂತು, ಮಂಜು, ಅನಿಲ, ರುದ್ರಪ್ಪ, ಸೋಮು, ಶ್ರೀನಿವಾಸ ರೆಡ್ಡೇರ, ಮಲ್ಲು ಹರ್ತಿ, ಮಂಜು ಕೊಪ್ಪದ, ಶಂಭು, ಪ್ರಶಾಂತ, ದೇವರಾಜ, ನಿಂಗಪ್ಪ ದೇಸಾಯಿಗೌಡರು, ಮಂಜು ಕರಡಿ, ಶಿವು ಗುಗ್ಗರಿ, ಸಚಿನ, ಕಿರಣ, ಅಭಿ ಜೋಗಿನ, ರಾಹುಲ ದೊಡ್ಡಮನಿ, ನಾಗರಾಜ ಎಲಿಗಾರ, ಸುನೀಲ ತಳವಗೇರಿ, ಪ್ರದೀಪ, ಶ್ರೀಧರ ಕೊಟ್ರೂರಶೆಟ್ಟರ, ಮಂಜುನಾಥ ಕುಂಬಾರ, ಅಚ್ಚು, ಸಂತೋಷ್ ಮುಂತಾದವರಿದ್ದರು.

> ಅಕ್ಟೋಬರ್ 4ರಂದು ಬಳಗದ ವತಿಯಿಂದ ಸರ್ಕಾರಿ ಶಾಲಾ ಮಕ್ಕಳಿಗೆ ನೋಟ್‌ಬುಕ್ ವಿತರಣಾ ಕಾರ್ಯಕ್ರಮ, ಅ.8ರಂದು ಬಾಲಗಂಗಾಧರ ತಿಲಕ್ ಪಾರ್ಕ್‌ನಲ್ಲಿ ಗಿಡಗಳನ್ನು ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಇದೇ ತಿಂಗಳು 21, 22ರಂದು ರಾಜ್ಯಮಟ್ಟದ ಟಗರಿನ ಕಾಳಗ, ನವಂಬರ್ 1ರಂದು ಭಗತ್‌ಸಿಂಗ್, ರಾಜಗುರು, ಸುಖದೇವ್ ಭುವನೇಶ್ವರಿದೇವಿಯ ಮೂರ್ತಿಗಳ ಭವ್ಯ ಮೆರವಣಿಗೆ ಹಮ್ಮಿಕೊಂಡಿದ್ದು, ಸಾರ್ವಜನಿಕರು ಎಲ್ಲಾ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಬೇಕೆಂದು ಪದಾಧಿಕಾರಿಗಳು ವಿನಂತಿಕೊಂಡಿದ್ದಾರೆ.

# ವಿಶ್ವಕರ್ಮ ಸಮುದಾಯ ಭವನಕ್ಕೆ ಸಹಾಯಧನ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾ ವಿಶ್ವಕರ್ಮ ನೌಕರರ ಕ್ಷೇಮಾಭಿವೃದ್ಧಿ ಸಂಘ ಹಾಗೂ ಅಂಗಸಂಸ್ಥೆಗಳ ಸಹಯೋಗದಲ್ಲಿ ನಗರದ ವಿಜಯನಗರ ಬಡಾವಣೆಯಲ್ಲಿ ನಿರ್ಮಿಸುತ್ತಿರುವ ವಿಶ್ವಕರ್ಮ ಸಮುದಾಯ ಭವನ ಕಟ್ಟಡಕ್ಕೆ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಯೋಜನೆ ಸಂಸ್ಥೆಯ ವತಿಯಿಂದ 3 ಲಕ್ಷ ರೂಪಾಯಿಗಳ ಸಹಾಯಧನ ಮಂಜೂರ ಮಾಡಲಾಗಿದೆ.

ಶ್ರೀಕ್ಷೇತ್ರದ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯಿಂದ ಸಹಾಯಧನದ ಮಂಜೂರಾತಿ ಪತ್ರವನ್ನು ಸಂಸ್ಥೆಯ ಗದಗ ಜಿಲ್ಲಾ ನಿರ್ದೇಶಕ ಯೋಗೇಶ ಅವರು ಜಿಲ್ಲಾ ವಿಶ್ವಕರ್ಮ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ರಾಜಗೋಪಾಲ ಡಿ.ಕಡ್ಲಿಕೊಪ್ಪ ಅವರಿಗೆ ನೀಡಿದರು.

ಈ ವೇಳೆ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಯೋಜನೆ ಸಂಸ್ಥೆಯ ಯೋಜನಾ ವ್ಯವಸ್ಥಾಪಕ ಸುರೇಂದ್ರ ನಾಯಕ, ವಿಶ್ವಕರ್ಮ ನೌಕರರ ಕ್ಷೇಮಾಭಿವೃದ್ಧಿ ಸಂಘದ ನಿರ್ದೇಶಕ ವಿಶ್ವನಾಥ ಕಮ್ಮಾರ, ಡಾ. ಸಿ.ವಿ ಬಡಿಗೇರ, ಕೆ.ಎಸ್ ಬಡಿಗೇರ, ಮಹೇಶ ಕಮ್ಮಾರ, ಸಿ.ಎಮ್ ಪತ್ತಾರ, ಸುರೇಶ ಗುಂಜಾಳ, ಶಶಿಧರ ಕಿತ್ತಲಿ ಹಾಗೂ ಮಧುಸೂಧನ ವಿಶ್ವಕರ್ಮ ಸೇರಿದಂತೆ ಮುಖಂಡರು ಭಾಗವಹಿಸಿದ್ದರು.



# ಸ್ವಚ್ಛತಾ ಹಿ ಸೇವಾ ಅಭಿಯಾನಕ್ಕೆ ಕೈ ಜೋಡಿಸಿ



■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರ ಜನ್ಮದಿನೋತ್ಸವ ಅಂಗವಾಗಿ ಸ್ವಚ್ಛತಾ ಹೀ ಸೇವಾ ಎಂಬ ಪರಿಕಲ್ಪನೆಯೊಂದಿಗೆ ದೇಶಾದ್ಯಂತ ಹಮ್ಮಿಕೊಂಡಿರುವ ಸ್ವಚ್ಛತಾ ಅಭಿಯಾನ ಕಾರ್ಯಕ್ರಮ ಅತ್ಯಂತ ಅರ್ಥಪೂರ್ಣವಾಗಿದೆ ಎಂದು ಹಿರಿಯ ದಿವಾಣಿ ನ್ಯಾಯಾಧೀಶರಾದ ಸರ್ವಮಂಗಳ ಕೆ.ಎಂ ಹೇಳಿದರು.

ಅವರು ಸೋಮವಾರ ಪುರಸಭೆಯ ಪೌರಕಾರ್ಮಿಕರೊಂದಿಗೆ ಕೋರ್ಟ್ ಆವರಣ, ಕಲ್ಯಾಣಿ, ರಸ್ತೆ ಸ್ವಚ್ಛತಾ ಅಭಿಯಾನದ ಶ್ರಮದಾನ ಕಾರ್ಯದಲ್ಲಿ ಪಾಲ್ಗೊಂಡು ಮಾತನಾಡಿ, ದೇಶದಲ್ಲಿ ಸ್ವಚ್ಛತೆಯ ಪರಿಕಲ್ಪನೆ ಇನ್ನಷ್ಟು ಚುರುಕುಗೊಳ್ಳಲು ಪ್ರತಿಯೊಬ್ಬರೂ ಕೈ ಜೋಡಿಸಬೇಕು. ಸ್ವಚ್ಛತೆ ಎಂಬುದು ನಿತ್ಯ ಮಂತ್ರವಾಗಬೇಕು ಈ ನಿಟ್ಟಿನಲ್ಲಿ ಯುವಕರು, ವಿದ್ಯಾರ್ಥಿಗಳು, ಸಂಘ ಸಂಸ್ಥೆಗಳು ಸಹಭಾಗಿತ್ವ ನೀಡುವ ಮೂಲಕ ಸ್ವಚ್ಛ, ಸುಂದರ, ಆರೋಗ್ಯಕರ ದೇಶ ನಿರ್ಮಾಣ ಸಾಧ್ಯವಾಗುತ್ತದೆ ಎಂದರು.

ಮುಖ್ಯಾಧಿಕಾರಿ ಶಂಕರ ಹುಲ್ಲಮ್ಮನವರ ಮಾತನಾಡಿ, ರಸ್ತೆ, ದೇವಸ್ಥಾನ, ಕೆರೆ, ಬಾವಿ, ಉದ್ಯಾನ, ಬಸ್‌ನಿಲ್ದಾಣ, ಶಾಲೆ ಸೇರಿ ಸಾರ್ವಜನಿಕ ಸ್ಥಳದಲ್ಲಿ ಸ್ವಚ್ಛತೆ ಕಾಪಾಡುವುದು ಎಲ್ಲರ ಕರ್ತವ್ಯವಾಗಿದೆ.

ಪರಿಸರ ಮತ್ತು ಜೀವಸಂಕುಲಕ್ಕೆ ಮಾರಕವಾಗಿರುವ ಪ್ಲಾಸ್ಟಿಕ್ ನಿಷೇದಿಸುವ ನಿಟ್ಟಿನಲ್ಲಿ ಕೈಗೊಂಡಿರುವ ಅಭಿಯಾನಕ್ಕೆ ಪ್ರತಿಯೊಬ್ಬ ನಾಗರಿಕರೂ ಸಹಕರಿಸಬೇಕು ಎಂದರು.

ಈ ವೇಳೆ ಮಂಜುನಾಥ ಮುದಗಲ್, ಹನಮಂತಪ್ಪ ನಂದೆಣ್ಣವರ, ಮಂಜುಳಾ ಹೂಗಾರ, ಎಸ್.ಪಿ.ಲಿಂಬಯ್ಯನಮಠ, ಶಿವಣ್ಣ ಮ್ಯಾಗೇರಿ, ನೇತ್ರಾ ಹೊಸಮನಿ, ಸಿದ್ದಪ್ಪ ಬಾಲೆಹೊಸೂರ, ಸರೋಜಾ ಪಾಟೀಲ, ಗಿರೀಶ ಹಿರೇಮಠ, ಬಸವಣ್ಣೆಪ್ಪ ನಂದೆಣ್ಣವರ, ಯಮಾ ಎಂ.ಎಚ್ ಹೆಬ್ಬಾಳ, ಉಮಾ ಬೆಳವಗಿ, ಹೇಮರಾಜ ಅಣ್ಣಿಗೇರಿ, ಮಹೇಶ ಹೊಸಮನಿ ಸೇರಿ ಕೋರ್ಟ್ ಮತ್ತು ಪುರಸಭೆ ಸಿಬ್ಬಂದಿ, ಪೌರಕಾರ್ಮಿಕರು ಇದ್ದರು.

# ಶಿಕ್ಷಕ ವೃತ್ತಿಯ ಗೌರವ ಕಾಪಾಡುವುದು ಎಲ್ಲರ ಕರ್ತವ್ಯ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಶಿಕ್ಷಕ ವೃತ್ತಿ ಅತ್ಯಂತ ಶ್ರೇಷ್ಠವಾಗಿದ್ದು, ಪ್ರತಿಯೊಬ್ಬ ವ್ಯಕ್ತಿಯ ಜೀವನದುದ್ದಕ್ಕೂ ಸ್ಮರಣೀಯವಾಗಿರುವ ವೃತ್ತಿಯನ್ನು ಕಾಯಾ–ವಾಚಾ–ಮನಸಾ ನಿರ್ವಹಿಸಿದಾಗ ವೃತ್ತಿಯ ಶ್ರೇಷ್ಠತೆ ಹೆಚ್ಚಿಸಲು ಸಾಧ್ಯ ಎಂದು ಬಿಇಓ ಜಿ.ಎಂ ಮುಂದಿನಮನಿ ಹೇಳಿದರು.

ಅವರು ಪಟ್ಟಣದ ತಾಯಿ ಪಾರ್ವತಿ ಮಕ್ಕಳ ಬಳಗದ ಸಭಾಂಗಣದಲ್ಲಿ ರವಿವಾರ ಸಂಜೆ ಸಮಸ್ತ ಗುರು ಬಳಗ ಸಹಯೋಗದಲ್ಲಿ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮದಿನೋತ್ಸವ ಹಾಗೂ 2023–24ನೇ ಸಾಲಿನಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಸ್ಮರಣೀಯ ಸೇವೆಗೈದು ಶಿಕ್ಷಣ ಇಲಾಖೆ, ವಿವಿಧ ಸಂಘ ಸಂಸ್ಥೆಗಳ ಪ್ರಶಸ್ತಿಗಳಿಗೆ ಭಾಜನರಾದ ಶಿಕ್ಷಕರಿಗೆ ನಡೆಸಿದ 'ಗುರು ಗೌರವ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಶಿಕ್ಷಕರು ಎಂದರೆ ಸಮಾಜವನ್ನು ತಿದ್ದುವ ಶಿಲ್ಪಿಗಳಿದ್ದ ಹಾಗೆ. ಅಲ್ಲದೇ ಸಮಾಜವೂ ಶಿಕ್ಷಕರ ಮೇಲೆ ಅಪಾರ ಗೌರವ ಭಾವನೆ ಹೊಂದಿದೆ. ಅದನ್ನು ಉಳಿಸಿಕೊಂಡು ಹೋಗುವದು ಶಿಕ್ಷಕರಾದವರ ಕರ್ತವ್ಯವಾಗಿದೆ. ತಾಲೂಕು ವ್ಯಾಪ್ತಿಯಲ್ಲಿ ಸಾಕಷ್ಟು ಜನ ಉತ್ತಮ ಶಿಕ್ಷಕ ಪ್ರಶಸ್ತಿಗೆ ಭಾಜನರಾಗಿದ್ದು ಹೆಮ್ಮೆಯ ಸಂಗತಿಯಾಗಿದೆ ಎಂದರು.

ಪ್ರಾಸ್ತಾವಿಕವಾಗಿ ಶಿಕ್ಷಕ ಬಿ.ಎಂ ಕುಂಬಾರ ಮತ್ತು ಸನ್ಮಾನಿತರ ಪರವಾಗಿ ಮುಖ್ಯ ಶಿಕ್ಷಕಿ ಇಂದುಮತಿ ಜಕ್ಕನಗೌಡ್ರ ಮಾತನಾಡಿದರು. ಎಸ್‌ಟಿಪಿಎಂಬಿ ಸಂಸ್ಥೆಯ ಜಯಲಕ್ಷ್ಮೀ ಗಡ್ಡದೇವರಮಠ, ಸುವರ್ಣಬಾಯಿ ಬಹದ್ದೂರ್‌ದೇಸಾಯಿ, ಜಯಲಕ್ಷ್ಮೀ ಮಹಾಂತಶೆಟ್ಟರ, ಕಸಾಪ ಅಧ್ಯಕ್ಷ ಈಶ್ವರ ಮೆಡ್ಲೇರಿ, ಡಿ.ಎಚ್ ಪಾಟೀಲ, ಎಮ್.ಎ ನಧಾಫ್, ಬಿ.ಎಸ್ ಹರಲಾಪುರ, ಚಂದ್ರು ನೇಕಾರ, ಪಿ.ಬಿ ಕರಾಟೆ, ಜೆ.ಡಿ ಲಮಾಣಿ, ಎಮ್.ಡಿ ವಾರದ, ಎಫ್.ಎಸ್ ತಳವಾರ, ವಿಜಯಕುಮಾರ ಬಿಳೆಯಲಿ ಸೇರಿ ಲಕ್ಷ್ಮೇಶ್ವರ ತಾಲೂಕಿನ ಶಿಕ್ಷಕರು, ಮಕ್ಕಳು ಭಾಗವಹಿಸಿದ್ದರು. ಕೆ.ಎಸ್ ಹೀರೇಮಠ, ಎಚ್.ಡಿ ನಿಂಗರೆಡ್ಡಿ, ಎನ್.ಎಸ್ ಬಂಕಾಪುರ ನಿರೂಪಿಸಿದರು.



# ಸ್ವಾಭಿಮಾನಿ ಕರವೇ ಗದಗ ಘಟಕದ ವತಿಯಿಂದ ಪ್ರತಿಭಾ ಪುರಸ್ಕಾರ

■ ವಿಜಯಸಾಕ್ಷಿ ಸುದ್ದಿ, ಗದಗ

ಇಂದಿನ ಪ್ರತಿಭಾವಂತ ಮಕ್ಕಳೇ ನಾಳಿನ ಉನ್ನತ ಅಧಿಕಾರಿಗಳು. ಶಿಕ್ಷಣದಲ್ಲಿ ಸಾಧನೆಗೈದ ನೂರಾರು ಪ್ರತಿಭಾವಂತ ಮಕ್ಕಳನ್ನು ಪುರಸ್ಕರಿಸಿ, ಮಕ್ಕಳಿಗಾಗಿ ಸಮಾರಂಭ ಏರ್ಪಡಿಸಿದ ಸ್ವಾಭಿಮಾನಿ ಕರವೇ ಗದಗ ಜಿಲ್ಲಾಧ್ಯಕ್ಷ ಎಮ್.ಎ ಕುರ್ತಕೋಟಿಯವರು ಸೂಕ್ತ ಕೆಲಸ ಮಾಡಿದ್ದಾರೆ. ಸ್ವಾಭಿಮಾನಿ ಕರವೇ ರಾಜ್ಯಾಧ್ಯಕ್ಷ ರಾಜೇಶ ರೆಡ್ಡಿಯವರಿಗೆ ಹಾಗೂ ಸರ್ವ ಪದಾಧಿಕಾರಿಗಳಿಗೂ ಪಂಡಿತ ಪುಟ್ಟರಾಜ ಕವಿ ಗವಾಯಿಗಳು ಆಶೀರ್ವವದಿಸಲಿ ಎಂದು ಪುಜ್ಯ



ಶ್ರೀ ಕಲ್ಲಯ್ಯಜ್ಜನವರು ಆಶೀರ್ವಚನ ನೀಡಿದರು.

ಅವರು ನಗರದಲ್ಲಿ ಸ್ವಾಭಿಮಾನಿ ಕರ್ನಾಟಕ ರಕ್ಷಣಾ ವೇದಿಕೆ ಗದಗ ಘಟಕದ ವತಿಯಿಂದ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಸ್ವಾಭಿಮಾನಿ ಕರವೇ ರಾಜ್ಯಾಧ್ಯಕ್ಷ ರಾಜೇಶ ರೆಡ್ಡಿ ಸಮಾರಂಭವನ್ನು ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ನರಗುಂದ ಕಾಂಗ್ರೆಸ್ ಮಾಧ್ಯಮ ವಕ್ತಾರ, ಕೆಪಿಸಿಸಿ ಸಂಯೋಜಕ ಸಂಗಮೇಶ ಕೊಳ್ಳಿ ವಹಿಸಿದ್ದರು. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಶೇ.80ಕ್ಕಿಂತ ಮೇಲ್ಪಟ್ಟು ಅಂಕಗಳನ್ನು ಗಳಿಸಿ ಸಾಧನೆಗೈದ 200 ವಿದ್ಯಾರ್ಥಿಗಳಿಗೆ ಪಾರಿತೋಷಕ ನೀಡಿ ಸನ್ಮಾನಿಸಲಾಯಿತು. ಮನರಂಜನಾ ಕಾರ್ಯಕ್ರಮದಲ್ಲಿ ಜ್ಯೂ. ರವಿಚಂದ್ರನ್ ಖ್ಯಾತಿಯ ಬೆಟಗೇರಿ ಮಲ್ಲ ವಾಸುದೇವ ಹುಣಸಿಮರದ ಕಾರ್ಯಕ್ರಮ ನಡೆಸಿಕೊಟ್ಟರು.

ಸಮಾರಂಭದಲ್ಲಿ ವೇದಿಕೆಯ ಪ್ರಮುಖರಾದ ಮಂಜುನಾಥ ಜಂಗರ್, ಹೊನ್ನಪ್ಪ ನಾಯಕ, ನಾಗರಾಜ ಹಟ್ಟಿ, ಕೊಟ್ರೇಶ ಮೈಗಲಮನಿ, ಲಿಂಗನಗೌಡ, ರವಿಕುಮಾರ ಚಿಂತಾಲ, ಖಾಜಾಸಾಬ ಇಸ್ಮಾಯಿನವರ, ವಿಜಯ ಕೋಟಿನ್, ಬಶೀರ ಮುಳಗುಂದ, ಯಶವಂತ ನಡವಿನಮನಿ, ನಾಗರಾಜ ಲಮಾಣಿ, ಮೈನುದ್ದಿನ ಎಚ್.ನದಾಫ, ಖುರ್ಷಿದ ಅಹ್ಮದ ಮುಲ್ಲಾ, ಸಿರಾಜ ಡಂಬಳ, ಸುವರ್ಣ, ರಾ. ತೋಟಗೇರಿ, ರಾ.ದೇ ಕಾರಭಾರಿ, ಮೇರಿ ರಾದೇ ಕಾರಭಾರಿ, ಉಸ್ಮಾನ ಮಾಳೆಕೊಪ್ಪ, ಇಮಾಮಸಾಬ ನಮಾಜಿ, ಫಕ್ರುಸಾಬ ಸೈದುಸಾಬ ಚಿಕ್ಕಮಣ್ಣೂರ್, ಮುಂತಾದವರು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಎಚ್.ವಿ ಬ್ಯಾಡಗಿ ನಿರೂಪಿಸಿದರು.

# ಬಿಜೆಪಿ ಕಾರ್ಯಾಲಯದಲ್ಲಿ ಗಾಂಧೀಜಿ, ಶಾಸ್ತ್ರೀಜಿ ಜಯಂತಿ ಆಚರಣೆ

▸▸ಮೊದಲನೇ ಪುಟದಿಂದ

ಆದರ್ಶಗಳನ್ನು ಎಲ್ಲರೂ ಪಾಲನೆ ಮಾಡಬೇಕೆಂದು ತಿಳಿಸಿ, ಲಾಲ್ ಬಾಹದ್ದೂರ ಶಾಸ್ತ್ರೀಜಿಯವರ ಜೀವನ ಚರಿತ್ರೆಯ ಕುರಿತು ಮಾತನಾಡಿದರು.

ವೇದಿಕೆಯ ಮೇಲೆ ಬಿಜೆಪಿ ಗದಗ ಜಿಲ್ಲಾಧ್ಯಕ್ಷ ಮುತ್ತಣ್ಣ ಲಿಂಗನಗೌಡ್ರ, ಗದಗ ನಗರ ಮಂಡಲ ಅಧ್ಯಕ್ಷ ಅನಿಲ್ ಅಬ್ಬಿಗೇರಿ, ಗದಗ–ಬೆಟಗೇರಿ ನಗರಸಭಾಧ್ಯಕ್ಷೆ ಉಷಾ ದಾಸರ, ಉಪಾಧ್ಯಕ್ಷೆ ಸುನಂದಾ ಬಾಕಳೆ, ಪ್ರಮುಖರಾದ ಶ್ರೀಪತಿ ಉಡುಪಿ, ತೋಟೊಸಾ ಭಾಂಡಗೆ, ಜಗನ್ನಾಥಸಾ ಭಾಂಡಗೆ, ಮಂಜುನಾಥ ಶಾಂತಗೇರಿ, ಸುರೇಶ ಚಿತ್ತರಗಿ, ನಾಗರಾಜ ತಳವಾರ, ಅಪ್ಪಣ್ಣ ಟೆಂಗಿನಕಾಯಿ, ಮಹಿಳಾ ಮುಖಂಡರಾದ ಶಾರದಾ ಸಜ್ಜನರ, ಜಯಶ್ರೀ ಉಗಲಾಟದ, ನಿರ್ಮಲಾ ಕೊಳ್ಳಿ, ರತ್ನಾ ದಾಸರ, ಪದ್ಮಿನಿ ಮುತ್ತಲದಿನ್ನಿ, ಅಕ್ಕಮ್ಮ ವಸ್ತ್ರದ, ವಿದ್ಯಾವತಿ ಗಡಗಿ, ರೇಖಾ ಬಂಗಾರಶೆಟ್ಟರ, ಜಯಶ್ರೀ ಅಣ್ಣಿಗೇರಿ, ಡಾ. ಕಮಲಾಕ್ಷೀ ಅಂಗಡಿ ಸೇರಿದಂತೆ ಹಲವಾರು ಪ್ರಮುಖರು ಉಪಸ್ಥಿತರಿದ್ದರು.



ಲಕ್ಷ್ಮೇಶ್ವರ ತಾಲೂಕಿನ ಬಟ್ಟೂರ ಗ್ರಾಪಂ ಗೆ ಲಭಿಸಿದ ಗಾಂಧಿ ಗ್ರಾಮ ಪುರಸ್ಕಾರವನ್ನು ಸೋಮವಾರ ಬೆಂಗಳೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ನೀಡಿ ಗೌರವಿಸಿದರು. ಗ್ರಾಪಂ ಅಧ್ಯಕ್ಷ ಜಗದೀಶಗೌಡ ಪಾಟೀಲ, ಪಿಡಿಓ ಎಂ.ಆರ್. ಮಾದರ ಪ್ರಶಸ್ತಿ ಸ್ವೀಕರಿಸಿದರು.

### ಕಾರ್ಮಿಕ ಕಲ್ಯಾಣ ಸಂಸ್ಥೆಯ 'ಕಾರ್ಮಿಕರ ಕುಟುಂಬ ಭದ್ರತೆ ಯೋಜನೆ'ಗೆ ಚಾಲನೆ ನೀಡಿದ ಸಚಿವ ಎಚ್.ಕೆ ಪಾಟೀಲ

# ಸಂಸ್ಥೆಯು ಗಟ್ಟಿತನದ ಉತ್ತಮ ಕಾರ್ಯ ಕೈಗೊಳ್ಳಲಿ

■ ವಿಜಯಸಾಕ್ಷಿ ಸುದ್ದಿ, ಗದಗ

ಕಟ್ಟಡ ಕಟ್ಟುವ ಕಾರ್ಮಿಕರು ದೇಶ ಕಟ್ಟುವ ಹಾಗೂ ಮನಸ್ಸು ಕಟ್ಟುವ ಕಾರ್ಯವನ್ನು ಮಾಡಬೇಕು. ಶ್ರಮಿಕರಿಗೆ ಸಿಗಬೇಕಾದ ಪ್ರತಿಫಲ, ಸೌಲಭ್ಯಗಳು ಲಭ್ಯವಾಗಬೇಕು. ಸರಕಾರದಿಂದ ಲಭ್ಯವಿರುವ ಸೌಲಭ್ಯಗಳನ್ನು ಕಾಯ್ದೆ ಕಾನೂನಿನ ಚೌಕಟ್ಟಿಗೆ ಒಳಪಟ್ಟು ಒದಗಿಸಲು ಪ್ರಯತ್ನಿಸುತ್ತೇನೆ ಎಂದು ಸಚಿವ ಎಚ್.ಕೆ ಪಾಟೀಲ ಹೇಳಿದರು.

ಅವರು ರವಿವಾರ ಗದುಗಿನ ಚನ್ನಮ್ಮ ಮಂಗಲ ಭವನದಲ್ಲಿ ಕಾರ್ಮಿಕ ಕಲ್ಯಾಣ ಸಂಸ್ಥೆಯ ಕಾರ್ಮಿಕರ ಕುಟುಂಬ ಭದ್ರತೆ ಯೋಜನೆಯನ್ನು ಉದ್ಘಾಟಿಸಿ ಮಾತನಾಡಿದರು.

ಗದುಗಿನ ಕಾರ್ಮಿಕ ಕಲ್ಯಾಣ ಸಂಸ್ಥೆ ಕಾರ್ಮಿಕರ ಕುಟುಂಬ ಭದತ್ರೆ ಯೋಜನೆಯನ್ನು ತನ್ನದೇ ಆದ ಇತಿಮಿತಿಯಲ್ಲಿ ರೂಪಿಸಿಕೊಂಡು ಕಾರ್ಮಿಕರ ಕಲ್ಯಾಣಕ್ಕೆ ಮುಂದಾಗಿರುವದು ಸ್ವಾಗತಾರ್ಹ. ಮಹ್ಮದ ಇರ್ಫಾನ್ ಡಂಬಳ ಅವರ ಅಧ್ಯಕ್ಷತೆಯಲ್ಲಿ ಎಲ್ಲ ಪದಾಧಿಕಾರಿಗಳು ಉತ್ತಮ ರೀತಿಯಿಂದ ಗಟ್ಟಿತನದ ಕಾರ್ಯ ಮಾಡಬೇಕೆಂದರು.



ಮುಖ್ಯ ಅತಿಥಿಯಾಗಿ ಆಗಮಿಸಿದ್ದ ರೋಣ ಶಾಸಕ ಜಿ.ಎಸ್ ಪಾಟೀಲ ಮಾತನಾಡಿ, ರಾಜ್ಯ ಸರಕಾರವು ಈಗಾಗಲೇ ಕಾರ್ಮಿಕ ಇಲಾಖೆಯ ಮೂಲಕ ಕಾರ್ಮಿಕರಿಗೆ ಸೌಲಭ್ಯಗಳನ್ನು ನೀಡುತ್ತಿದ್ದು, ಇವುಗಳನ್ನು ಸದುಪಯೋಗ ಮಾಡಿಕೊಳ್ಳುವ ಮೂಲಕ ಆರ್ಥಿಕವಾಗಿ ಸಬಲರಾಗಬೇಕು ಎಂದರು.

ಸಾನ್ನಿಧ್ಯ ವಹಿಸಿದ್ದ ಗದುಗಿನ ವೀರೇಶ್ವರ ಪುಣ್ಯಾಶ್ರಮದ ಪೂಜ್ಯ ಡಾ.ಕಲ್ಲಯ್ಯಜ್ಜನವರು ಆಶೀರ್ವಚನ ದಯಪಾಲಿಸಿ, ಸತ್ಯ ಶುದ್ಧ ಕಾಯಕ ಫಲ ನೀಡಬಲ್ಲದು. ಅಂತಹ ಕಾಯಕ ನಿಮ್ಮದಾಗಲಿ, ನಿಮ್ಮ ಬೆವರಿನ ಶ್ರಮಕ್ಕೆ ತಕ್ಕ ಪ್ರತಿಫಲ ಸಿಗುವಂತಾಗಲಿ, ಈ ಸಂಸ್ಥೆಯಿಂದ ಎಲ್ಲ ಕಾರ್ಮಿಕರಿಗೆ ಕಲ್ಯಾಣವಾಗಲಿ ಎಂದರು.

ಕಾರ್ಯಕ್ರಮದಲ್ಲಿ ಎಚ್.ಕೆ ಪಾಟೀಲ ಸೇವಾ ತಂಡಗಳ ಮುಖ್ಯಸ್ಥರು, ಸಾಧಕ ಮಹನೀಯರು, ಹಿರಿಯ ಕಾರ್ಮಿಕರು, ಕಾರ್ಮಿಕ ಮುಖಂಡರನ್ನು ಸನ್ಮಾನಿಸಲಾಯಿತು. ಕಾರ್ಮಿಕ ಕಲ್ಯಾಣ ಸಂಸ್ಥೆಯ ಪದಾಧಿಕಾರಿಗಳಾದ ಶಂಕರಗೌಡ ಭರಮಗೌಡ, ಎಸ್.ಪಿ ಕರಿಸೋಮನಗೌಡರ, ಭೀಮಪ್ಪ ಪೂಜಾರ, ನಿಂಗಪ್ಪ ಕಟ್ಟಿಮನಿ, ಜಾನಿಸಾಬ ಹಣಗಿ, ಈಶಪ್ಪ ಬಳ್ಳಾರಿ, ಮಹ್ಮದ ಯೂಸುಫ್ ಬೇಪಾರಿ, ಎಸ್.ಎಸ್ ಗುರುಬಸಣ್ಣವರ, ಗೌಸ್ ಬಳ್ಳಾರಿ, ಮಲ್ಲಪ್ಪ ಜೀವಣ್ಣವರ, ಸುನೀಲ ಚಳಗೇರಿ, ಮಹ್ಮದಸಲೀಂ ಕಾತರಕಿ, ಅಪ್ಪುರಾಜ ಭದ್ರಕಾಳಿಮಠ, ಬಸವರಾಜ ಜಿನಗಾ ವೇದಿಕೆ ಮೇಲೆ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಮೋತಿಲಾಲ ಚವ್ಹಾಣ, ಶಫಿ ಸಿದ್ಧಿ, ಸಿದ್ಧಾರೂಢ ಪಾತ್ರೋಟ, ರಮೇಶ ಬಿಳೆಯಲಿ, ಮೆಹಬೂಬಖಾನ್ ಪಠಾಣ, ರಸೀದ್ ಬಳ್ಳಾರಿ, ಬುಡನ್‌ಸಾಬ ಜಾಗೀರದಾರ, ರಫೀಕ್ ನಾಯ್ಕರ್, ಮುದಸರ್ ಬಳ್ಳಾರಿ, ಅನ್ವರ ಶಿರಹಟ್ಟಿ, ನೂರ್ ಬಳ್ಳಾರಿ, ರಮಜಾನ್‌ಸಾಬ ವಾಲೀಕಾರ, ದಾವಲ ಹಂಚಿನಾಳ, ಮೆಹಬೂಬ ಬೆಳಗಟ್ಟಿ, ಆನಂದ ಕಲಾಲ, ಹರ್ಷವರ್ಧನ ಹುಬ್ಬಳ್ಳಿ, ಪರಶುರಾಮ ಸಿಂಧೆ, ಸಾಹೇರಾಭಾನು ಬಳ್ಳಾರಿ, ವಾಹೀದಾ ಖಲೀಫಾ, ಪಾಲಾಕ್ಷವ್ವ ವಾಲ್ಮೀಕಿ, ಅನಸವ್ವ ಸೆರೆಗಾರ ಮುಂತಾದವರಿದ್ದರು.

ರೇಣುಕಾ, ಅನ್ನಪೂರ್ಣ, ಯಶೋದಾ, ಕಾವೇರಿ ಹಾಗೂ ವಿಜಯಲಕ್ಷ್ಮೀ ಪ್ರಾರ್ಥಿಸಿದರು. ಝಡ್.ಬಿ ಬೇಲೇರಿ ಸ್ವಾಗತಿಸಿದರು. ನಾಶೀರ್ ಚಿಕೇನಕೊಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು. ಮಹ್ಮದ್‌ಶಫಿ ಯರಗುಡಿ ನಿರೂಪಿಸಿದರು. ಕೆ.ಬಿ ಕುಡಗುಂಟಿ ವಂದಿಸಿದರು.

> ಕಾರ್ಮಿಕ ಮುಖಂಡ ಡಾ. ಡಿ.ರಮೇಶ, ಕಾರ್ಮಿಕರು ಸಂಘಟಿಕರಾಗಬೇಕು, ಸಂಘಟನೆಯಲ್ಲಿ ಬಲವಿದೆ ಎಂದರು. ಅಧ್ಯಕ್ಷತೆ ವಹಿಸಿದ್ದ ಕಾರ್ಮಿಕ ಕಲ್ಯಾಣ ಸಂಸ್ಥೆಯ ಅಧ್ಯಕ್ಷ ಮಹ್ಮದ ಇರ್ಫಾನ್ ಡಂಬಳ ಮಾತನಾಡಿ, ಕಾರ್ಮಿಕರ ಸಂಕಷ್ಟಗಳಿಗೆ ನೆರವಾಗಲು, ಕಾರ್ಮಿಕ ಕಲ್ಯಾಣಕ್ಕಾಗಿಯೇ ಹುಟ್ಟಿಕೊಂಡ ಈ ಸಂಸ್ಥೆ ಎಲ್ಲ ಪದಾಧಿಕಾರಿಗಳ ಸಹಕಾರದೊಂದಿಗೆ ಒಳ್ಳೆ ರೀತಿಯ ಕೆಲಸ ಮಾಡುವ ಮೂಲಕ ಮಾದರಿ ಸಂಸ್ಥೆಯನ್ನಾಗಿಸಲು ಪ್ರಯತ್ನಿಸುವೆ ಎಂದರು.

# ನಿಧನ ವಾರ್ತೆ

## ಗುದ್ನೆಪ್ಪ ಕುಂಬಾರ



**ಲಕ್ಕುಂಡಿ:** ಇಲ್ಲಿಯ ಕುಂಬಾರ ಓಣಿಯ ನಿವಾಸಿ ಗುದ್ನೆಪ್ಪ ಗುರಲಿಂಗಪ್ಪ ಕುಂಬಾರ(78) ರವಿವಾರ ರಾತ್ರಿ ನಿಧನರಾದರು.


ಮೃತರು ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

# ವ್ಹಿ.ಬಿ ಸೋಮನಕಟ್ಟಿಮಠರಿಗೆ ನಿಗಮ ಮಂಡಳಿ ಅಧ್ಯಕ್ಷ ಸ್ಥಾನ ನೀಡಿ

■ವಿಜಯಸಾಕ್ಷಿ ಸುದ್ದಿ, ಗದಗ

ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತರಾಗಿ, ಪಕ್ಷ ವಹಿಸಿದ ಅನೇಕ ಜವಾಬ್ದಾರಿಗಳನ್ನು ಸಮರ್ಥವಾಗಿ ನಿರ್ವಹಿಸಿ, ಕಾರ್ಯಕರ್ತರ ಹಾಗೂ ಮುಖಂಡರ ವಿಶ್ವಾಸಕ್ಕೆ ಪಾತ್ರರಾಗಿರುವ ಗದಗ ಜಿಲ್ಲಾ ಕಾಂಗ್ರೆಸ್ ಸಮಿತಿಯ ಮಹಾಪ್ರಧಾನ ಕಾರ್ಯದರ್ಶಿ ವೀರಯ್ಯ ಬಿ.ಸೋಮನಕಟ್ಟಿಮಠ ಅವರಿಗೆ ಸರ್ಕಾರ ಯಾವುದಾದರೊಂದು ನಿಗಮ ಮಂಡಳಿ ಅಧ್ಯಕ್ಷ ಸ್ಥಾನ ನೀಡಬೇಕು ಎಂದು ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ ಪಾಟೀಲ, ವಿ.ಪ ಮುಖ್ಯ ಸಚೇತಕ ಸಲೀಂ ಅಹ್ಮದ್ ಹಾಗೂ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಜಿ.ಎಸ್ ಪಾಟೀಲ ಅವರನ್ನು ಒತ್ತಾಯಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ರೋಣ



ತಾಲೂಕಾ ಯುವ ಕಾಂಗ್ರೆಸ್ ಅಧ್ಯಕ್ಷರಾಗಿ 23 ವರ್ಷಗಳ ಕಾಲ ಸೇವೆ ಸಲ್ಲಿಸಿ, 2013ರಿಂದ ಗದಗ ಜಿಲ್ಲಾ ಕಾಂಗ್ರೆಸ್ ಸಮಿತಿಯ ಮಹಾ ಪ್ರಧಾನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿರುವ ಹಾಗೂ ಕಳೆದ ವಿಧಾನಸಭಾ ಚುನಾವಣೆಯಲ್ಲಿ ನರಗುಂದ ವಿಧಾನಸಭಾ ಕ್ಷೇತ್ರದ ಉಸ್ತುವಾರಿಯಾಗಿ ಕರ್ತವ್ಯ ನಿರ್ವಹಿಸಿರುವ ಸೋಮನಕಟ್ಟಿಮಠ ಒಬ್ಬ ಸಮರ್ಥ ನಾಯಕರಾಗಿದ್ದಾರೆ ಎಂದಿದ್ದಾರೆ.

ಕರ್ನಾಟಕ ರಾಜ್ಯ ತೆಂಗು ನಾರಿನ ಅಭಿವೃದ್ಧಿ ನಿಗಮ ನಿಯಮಿತದ ನಾಮನಿರ್ದೇಶಿತ ಸದಸ್ಯರಾಗಿ ಸರ್ಕಾರ ವಹಿಸಿದ ಜವಾಬ್ದಾರಿಗಳನ್ನು ದಕ್ಷತೆ ಹಾಗೂ ಪ್ರಾಮಾಣಿಕತೆಯಿಂದ ನಿರ್ವಹಿಸಿದ ಸೋಮನಕಟ್ಟಿ ಮಠ ಅವರಿಗೆ ನಿಗಮ ಮಂಡಳಿ ಅಧ್ಯಕ್ಷ ಸ್ಥಾನ ನೀಡಿದಲ್ಲಿ ಸರ್ಕಾರಕ್ಕೆ ಒಳ್ಳೆಯ ಹೆಸರು ತರುವ ನಿಟ್ಟಿನಲ್ಲಿ ಸೇವೆ ಸಲ್ಲಿಸುವರು ಎಂಬ ವಿಶ್ವಾಸವಿದೆ ಎಂದು ಪಕ್ಷ ಮುಖಂಡರಾದ ನಿಂಗನಗೌಡ ಲಕ್ಕನಗೌಡರ, ಮೌನೇಶ ಸಿ.ಬಡಿಗೇರ, ಪ್ರಶಾಂತ ರಾಠೋಡ, ಶ್ರೀಕಾಂತ ಅವಧೂತ ವಕೀಲರು, ಬಿಸ್ಮಿಲ್ಲಾ ನದಾಫ್, ಸಂಜೀವ್ ಆರ್.ದೊಡ್ಡಮನಿ, ಅಂದಪ್ಪ ಕಲ್ಯಾಣಿ, ಸುನೀಲ ಬಸವರಡ್ಡೇರ, ಎಮ್.ಎಸ್ ದಢೇಸೂರಮಠ, ಬಂದೂನವಾಜ್ ಗಡಾದ, ವ್ಹಿ.ಜಿ ಬಾವೂರಮಠ ಸೇರಿದಂತೆ ಅನೇಕ ಮುಖಂಡರು ಕೋರಿದ್ದಾರೆ.

## ‘ಕೆ.ಆರ್ ಲಿಂಗಪ್ಪ ಜಾನಪದ ಪ್ರಶಸ್ತಿ ಪ್ರದಾನ-2022’ ಕಾರ್ಯಕ್ರಮದಲ್ಲಿ ಡಾ. ತೋಂಟದ ಶ್ರೀಗಳು

# ಶರಣ ಸಾಹಿತ್ಯ ಅತ್ಯಂತ ಶ್ರೇಷ್ಠ, ಪವಿತ್ರವಾದುದು



ವಚನ ಸಾಹಿತ್ಯ ಬದುಕಿನ ಸಾಹಿತ್ಯ. ಸ್ಥಾವರವನ್ನು ದೂರ ಇಟ್ಟು ಇಷ್ಟಲಿಂಗಪೂಜೆ ಸಂಸ್ಕೃತಿಯನ್ನು ತಂದರು. ದೇವಾಲಯವನ್ನು ದೂರ ಇಟ್ಟು ದೇಹಾಲಯ ಸಂಸ್ಕೃತಿಯನ್ನು ತಂದರು. ಕಂದಾಚಾರದಲ್ಲಿ ಮುಳಗಿದವರನ್ನು ಲಿಂಗಾಚಾರದ ಕಡೆಗೆ ತಂದರು. ದಾನ ಸಂಸ್ಕೃತಿಯಿಂದ ದಾಸೋಹ ಸಂಸ್ಕೃತಿ ಬೆಳಕಿಗೆ ತಂದರು. ಎಲ್ಲರಿಗೂ ಕಾಯಕ ಕಡ್ಡಾಯ ಎಂಬ ಧ್ಯೇಯವಾಕ್ಯವನ್ನು ಮೊಳಗಿಸಿದರು. ಪುರುಷ ಸ್ತ್ರೀಯರಲ್ಲಿ ಸಮಾನತೆಯ ಸಂದೇಶವನ್ನು ಶರಣರು ಸಾರಿದ್ದಾರೆ ಎಂದು ಡಾ. ವೀರಣ್ಣ ರಾಜೂರು ಅಭಿಪ್ರಾಯಪಟ್ಟರು.

■ವಿಜಯಸಾಕ್ಷಿ ಸುದ್ದಿ, ಗದಗ

ಶರಣ ಸಾಹಿತ್ಯ ಹೆಚ್ಚಾಗಿ ಭಾಷಣಕ್ಕೆ ಬಳಕೆಯಾಗುತ್ತಿದೆ. ಅದರ ಬದಲಾಗಿ, ಈ ಸಾಹಿತ್ಯವನ್ನು ಬದುಕಿನಲ್ಲಿ ಅಳವಡಿಕೊಳ್ಳುವ ಮಹತ್ತರ ಕೆಲಸ ಆಗಬೇಕು. ಮಾನವ ಹಕ್ಕುಗಳ ಬಗ್ಗೆ ಮೊಟ್ಟಮೊದಲು ಧ್ವನಿ ಎತ್ತಿದವರು ಅಣ್ಣ ಬಸವಣ್ಣನವರು ಎಂದು ಸಚಿವ ಎಚ್.ಕೆ ಪಾಟೀಲ ಅಭಿಪ್ರಾಯಪಟ್ಟರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು-ಮೈಸೂರು ಇವರು ಗದಗ ಜಿಲ್ಲಾ ಘಟಕದ ಸಹಯೋಗದೊಂದಿಗೆ ಗದುಗಿನಲ್ಲಿ ಹಮ್ಮಿಕೊಂಡಿದ್ದ ಕೆ.ಆರ್ ಲಿಂಗಪ್ಪ ಜಾನಪದ ಪ್ರಶಸ್ತಿ ಪ್ರದಾನ-2022 ಹಾಗೂ ಪರಿಷತ್ತಿನ ಗ್ರಂಥಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು ಮಾತನಾಡಿ, ಕೆ.ಆರ್ ಲಿಂಗಪ್ಪ ನಮ್ಮ ನಾಡಿನ ಹೆಸರಾಂತ ಜಾನಪದ ವಿದ್ವಾಂಸರು. ಅವರ ಹೆಸರಿನಲ್ಲಿ ಪ್ರಶಸ್ತಿ ನೀಡುತ್ತಿರುವುದು ಹೆಮ್ಮೆಯ ವಿಷಯ. ಜಾನಪದ ಕ್ಷೇತ್ರವನ್ನು ಉಳಿಸಿ ಬೆಳೆಸಿದ ಶ್ರೇಯಸ್ಸು ಲಿಂಗಪ್ಪ ಮತ್ತು ಗೋರುಚ ಅವರದ್ದು. ಶರಣ ಸಾಹಿತ್ಯ ಅತ್ಯಂತ ಶ್ರೇಷ್ಠ ಮತ್ತು ಪವಿತ್ರವಾದ ಸಾಹಿತ್ಯ. ಗ್ರಾಮಾಂತರ ಪ್ರದೇಶಕ್ಕೆ ಶರಣ ಸಾಹಿತ್ಯ ತಲುಪಿಸುವಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಮಹತ್ವದ ಪಾತ್ರ ವಹಿಸಿದೆ. ರಾಜ್ಯ ಮತ್ತು ತಾಲೂಕುಗಳಲ್ಲಿ ತನ್ನ ವ್ಯಾಪ್ತಿಯನ್ನು ವಿಸ್ತರಿಸಿ ಕಾರ್ಯನಿರ್ವಹಿಸುತ್ತಿದೆ. ನಾಡಿನಾದ್ಯಂತ ಅನೇಕ ವಿನೂತನ ಚಟುವಟಿಕೆಗಳು ಶರಣ ಸಾಹಿತ್ಯ ಪರಿಷತ್ತಿನಿಂದ ನಡೆಯುತ್ತಿದೆ ಎಂದು ಶ್ರೀಗಳು ಶ್ಲಾಘಿಸಿದರು.

ಡಾ. ವೀರಣ್ಣ ರಾಜೂರು ಮಾತನಾಡಿ, ವಚನ ಸಾಹಿತ್ಯ ಕರ್ನಾಟಕದ ಕಲ್ಯಾಣದಲ್ಲಿ ನಡೆದ ಮಾನವೋದ್ಧಾರದ ಮಹಾಕ್ರಾಂತಿಯ ಉಪಸೃಷ್ಟಿಯಾಗಿದೆ. ಬಸವಾದಿ ಶಿವಶರಣರು ವಚನಗಳನ್ನು ಮಾಧ್ಯಮವಾಗಿಟ್ಟುಕೊಂಡು ಕ್ರಾಂತಿ ನಡೆಸುತ್ತಿದ್ದರು. ಮಹಾಕ್ರಾಂತಿಯ ಮಹಾಸೂತ್ರಧಾರಿ, ಮಹಾಮಾನವತಾವಾದಿ ಬಸವಣ್ಣನವರು. ಕ್ರಾಂತಿಯಲ್ಲಿ ತಳಸಮುದಾಯದ ಎಲ್ಲ ಕಾಯಕಜೀವಿಗಳು ಒಳಗೊಂಡ ಪರ್ಯಾಯ ಸಂಸ್ಕೃತಿಯನ್ನು ಶರಣರು ಸೃಷ್ಟಿಸಿದ್ದಾರೆ ಎಂದು ಹೇಳಿದರು. ಸೀ. ವೀರಣ್ಣ ಮಾತನಾಡಿ, 12ನೇ ಶತಮಾನದ ನಂತರ 900 ವರ್ಷಗಳ ಅಂತರದಲ್ಲಿ ಶರಣ ಚಳುವಳಿ ಈ ನಾಡಿನಲ್ಲಿ ಹೇಗೆ ಬೆಳೆಯಬೇಕಾಗಿತ್ತೋ ಹಾಗೆ ಬೆಳೆದಿಲ್ಲ ಎಂಬುದು ನೋವಿನ ಸಂಗತಿಯೆಂದರು.

ಕೆ.ಆರ್ ಲಿಂಗಪ್ಪ ಜಾನಪದ ಪ್ರಶಸ್ತಿಯನ್ನು ಜನಪದ ಗಾಯಕ ಬಿ.ಲಕ್ಷ್ಮಣ ಗುತ್ತೇದಾರರಿಗೆ ಪ್ರದಾನ ಮಾಡಲಾಯಿತು. ಗೋರುಚ ಅವರು ರಚಿಸಿದ ‘ವಚನ ಸಾಹಿತ್ಯ ನನ್ನ ದೃಷ್ಟಿಯಲ್ಲಿ’ ಮತ್ತು ಡಾ. ಸಿ.ವೀರಣ್ಣ ಅವರು ರಚಿಸಿದ ‘ಪರ್ಯಾಯ ಸಂಸ್ಕೃತಿ-ವಚನ ಸಂಪುಟ’ ಕೃತಿಗಳನ್ನು ಲೋಕಾರ್ಪಣೆ ಮಾಡಲಾಯಿತು.

ಸಮಾರಂಭದಲ್ಲಿ ಅಪ್ಪಾರಾವ ಅಕ್ಕೋಣಿ, ಡಾ. ಗೋ.ರು ಚನ್ನಬಸಪ್ಪ, ಪ್ರಕಾಶ ಅಂಗಡಿ, ಚನ್ನಬಸಪ್ಪ ಕಂಠಿ, ಪರಮೇಶ್ವರಗೌಡ ಶಿ.ಎರೇಸೀಮಿ, ಎಸ್.ಎಸ್ ಪಾಟೀಲ ಮುಂತಾದವರು ಉಪಸ್ಥಿತರಿದ್ದರು.

# ಎಚ್.ಕೆ ಪಾಟೀಲ ಸೇವಾ ತಂಡದಿಂದ ಕಣ್ಣಿನ ತಪಾಸಣೆ ಯಶಸ್ವಿ



■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಕಾಟನ್ ಸೇಲ್ ಸೊಸೈಟಿಯ ಕಾಂಗ್ರೆಸ್ ಕಾರ್ಯಾಲಯದಲ್ಲಿ ಎಚ್.ಕೆ ಪಾಟೀಲ್ ಸೇವಾ ತಂಡದಿಂದ ಹಮ್ಮಿಕೊಂಡಿದ್ದ ಉಚಿತ ನೇತ್ರ ತಪಾಸಣಾ ಶಿಬಿರವನ್ನು ಸಚಿವರಾದ ಡಾ. ಎಚ್.ಕೆ ಪಾಟೀಲ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಚಿವರು, ಮನುಷ್ಯನಿಗೆ ಕಣ್ಣು ಅತಿ ಮುಖ್ಯವಾದ ಅಂಗ. ಗದಗ-ಬೆಟಗೇರಿ ಅವಳಿ ನಗರವನ್ನು ಅಂಧಮುಕ್ತ ನಗರವನ್ನಾಗಿ ಮಾಡಲು ನಾವೆಲ್ಲರೂ ಶ್ರಮಿಸಬೇಕಾಗಿದೆ ಎಂದರಲ್ಲದೆ, ಕಣ್ಣಿನ ತಪಾಸಣೆ ನಿರಂತರವಾಗಿ ನಡೆಯಬೇಕೆಂದು ಸೇವಾ ತಂಡದ ಟಾಸ್ಕ್ ಫೋರ್ಸ್ ಸಮಿತಿಯ ಮುಖ್ಯಸ್ಥ ಎಂ.ಸಿ ಶೇಖ ಅವರಿಗೆ ಸೂಚಿಸಿದರು.

ಶಿಬಿರದಲ್ಲಿ ಒಟ್ಟು 452 ಜನರ ಕಣ್ಣಿನ ತಪಾಸಣೆ ನಡೆಸಿ, 171 ಜನರಿಗೆ ಸ್ಥಳದಲ್ಲಿಯೇ ಚಸ್ಮಾ ವಿತರಿಸಲಾಯಿತು.

146 ದೂರ ದೃಷ್ಟಿಯುಳ್ಳವರ ಪೈಕಿ 77 ಜನರನ್ನು ಶಸ್ತ್ರಚಿಕಿತ್ಸೆಗೆ ಆಯ್ಕೆ ಮಾಡಲಾಯಿತು.

ಶಹರ ಕಾಂಗ್ರೆಸ್ ಅಧ್ಯಕ್ಷ ಬಿ.ಬಿ ಅಸೂಟಿ, ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಪ್ರಭು ಬುರಬುರೆ, ಗುರಣ್ಣ ಬಳಗಾನೂರ ಉಪಸ್ಥಿತಿಯಲ್ಲಿ ಡಾ. ನಾಗನೂರು ಇವರ ಮಾರ್ಗದರ್ಶನದಲ್ಲಿ ಡಾ. ವೇಮನ್ ಸಾಹುಕಾರ್ ನೇತೃತ್ವದಲ್ಲಿ ಎಂ.ಎಂ ಜೋಶಿ ಹುಬ್ಬಳ್ಳಿ ಹಾಗೂ ಆರ್‌ಎಂಎಸ್ ಹುಲಕೋಟಿ ಆಸ್ಪತ್ರೆಯ ವೈದ್ಯರ ತಂಡದವರು ಕಣ್ಣಿನ ತಪಾಸಣೆ ಮಾಡಿದರು.

# ಬಿಜೆಪಿ ವತಿಯಿಂದ ಬಾಪೂಜಿಗೆ ನಮನ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಇಲ್ಲಿನ ಸೋಮೇಶ್ವರ ಪಾದಗಟ್ಟಿ ಹತ್ತಿರದ ಗಾಂಧಿ ಮಂದಿರದಲ್ಲಿ ಮಹಾತ್ಮ ಗಾಂಧಿ ಜಯಂತಿ ಅಂಗವಾಗಿ ಸೋಮವಾರ ಭಾರತೀಯ ಜನತಾ ಪಾರ್ಟಿ ಶಿರಹಟ್ಟಿ ಮಂಡಳ ಮತ್ತು ಲಕ್ಷ್ಮೇಶ್ವರ ನಗರ ಘಟಕದ ವತಿಯಿಂದ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಮೂರ್ತಿ ಮತ್ತು ಲಾಲ್ ಬಹದ್ದೂರ ಶಾಸ್ತ್ರೀಜಿ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ನಮನ ಸಲ್ಲಿಸಲಾಯಿತು.

ಈ ವೇಳೆ ಶಾಸಕ ಡಾ. ಚಂದ್ರು ಲಮಾಣಿ, ಮುಖಂಡರಾದ ನಿಂಗಪ್ಪ ಬನ್ನಿ, ಆರ್.ವಿ ವೇರ್ಣೆಕರ, ಅಶೋಕ ಬಟಗುರ್ಕಿ, ಮಾಲತೇಶ ಅಗಡಿ, ಮಂಜು ಹೊಗೆಸೊಪ್ಪಿನ, ಗಿರೀಶ ಚೌರಡ್ಡಿ, ಬಸವರಾಜ ಚಕ್ರಸಾಲಿ, ಆದೇಶ ಬರಿಗಾಲಿ, ವೈಭವ ಗೋಗಿ, ಕಿರಣ ಮಹಾಂತಶೆಟ್ಟರ, ವಿಶಾಲ ಬಟಗುರ್ಕಿ, ಮಲ್ಲನಗೌಡ ಪಾಟೀಲ, ಮಂಜುನಾಥ ಗಜಾಕೋಶ, ವೀರೇಶ ಸಾಸಲವಾಡ, ಶಕ್ತಿ ಕತ್ತಿ, ಗೋಪಾಲರಾವ ನಾಯಕ, ಬಸವರಾಜ ಮಜ್ಜಿಗುಡ್ಡ, ಅಭಯ ಜೈನ್, ವಿನಯ ಪಾಟೀಲ, ವಿನಾಯಕ ಸುಣಗಾರ ಸೇರಿದಂತೆ ಹಲವರಿದ್ದರು.

## ಪತ್ರಕರ್ತರ ಕುಟುಂಬ ಸದಸ್ಯರು, ಪತ್ರಿಕಾ ವಿತಕರು ಭಾಗಿ

# ಪತ್ರಕರ್ತರಿಗೆ ಉಚಿತ ಆರೋಗ್ಯ ತಪಾಸಣೆ

■ವಿಜಯಸಾಕ್ಷಿ ಸುದ್ದಿ, ಗದಗ

ವಿಶ್ವ ಹೃದಯ ದಿನದ ಅಂಗವಾಗಿ ಧಾರವಾಡದ ನಾರಾಯಣ ಹಾರ್ಟ್ ಸೆಂಟರ್ ಹಾಗೂ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಜಿಲ್ಲಾ ಘಟಕದ ವತಿಯಿಂದ ಜಿಲ್ಲೆಯ ಕಾರ್ಯನಿರತ ಪತ್ರಕರ್ತರಿಗೆ, ಅವರ ಕುಟುಂಬ ಸದಸ್ಯರಿಗೆ ಹಾಗೂ ಪತ್ರಿಕಾ ವಿತರಕರಿಗೆ ರವಿವಾರ ನಗರದ ಪತ್ರಿಕಾ ಭವನದಲ್ಲಿ ಉಚಿತ ಹೃದಯರೋಗ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು.

ಈ ಶಿಬಿರದಲ್ಲಿ ಬಿಪಿ, ಶುಗರ್, ಇಸಿಜಿ ಹಾಗೂ 2ಡಿ ಇಕೋ ಪರೀಕ್ಷೆ ನಡೆಸಲಾಯಿತು. ಡಾ. ಮಹಾಂತೇಶ ಉಳ್ಳಾಗಡ್ಡಿ ಅವರು ಚಿಕಿತ್ಸಾ ಸಲಹೆ ನೀಡಿದರು.

ವೈದ್ಯ ಸಿಬ್ಬಂದಿ ವರ್ಗ ವೈದ್ಯಕೀಯ ಸೇವೆ ನೀಡಿದರು. ಶಿಬಿರದಲ್ಲಿ ಜಿಲ್ಲಾ ಕೇಂದ್ರದಲ್ಲಿ ಕಾರ್ಯನಿರ್ವಹಿಸುವ ಪತ್ರಕರ್ತರು ಸೇರಿ ಹೊಳೆಆಲೂರ, ಮುಳಗುಂದ, ಗಜೇಂದ್ರಗಡ, ನರೇಗಲ್ಲ, ಲಕ್ಷ್ಮೇಶ್ವರ, ಮುಂಡರಗಿ ತಾಲೂಕಿನ ಪತ್ರಕರ್ತರು, ಕುಟುಂಬ ಸದಸ್ಯರು, ಪತ್ರಿಕಾ ವಿತರಕರು ಸೇರಿದಂತೆ 80ಕ್ಕೂ ಅಧಿಕ ಜನ ತಪಾಸಣೆ ಮಾಡಿಸಿಕೊಂಡು, ವೈದ್ಯರ ಸಲಹೆ ಪಡೆದರು.

ಈ ಸಂದರ್ಭದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಗದಗ ಜಿಲ್ಲಾಧ್ಯಕ್ಷರಾದ ರಾಜು ಎಂ. ಹೆಬ್ಬಳ್ಳಿ, ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಎಚ್. ಎಂ. ಶರೀಫನವರ್, ಜಿಲ್ಲಾ ಉಪಾಧ್ಯಕ್ಷ ಬನೇಶ ಕುಲಕರ್ಣಿ, ಕಾರ್ಯದರ್ಶಿ ಶಂಕರ ಗುರಿಕಾರ, ಹಿರಿಯ ಪತ್ರಕರ್ತರದಾದ ಹನುಮಾನಸಿಂಗ ಜಮಾದಾರ, ಶಿವಯ್ಯ ಶಿವಪ್ಪನಮಠ, ಬಸವರಾಜ ದಂಡಿನ, ಸಲೀಂ ಬಳಬಟ್ಟಿ, ವೆಂಕಟೇಶ ಇಮರಾಪೂರ, ರುದ್ರಗೌಡ ಪಾಟೀಲ, ಸಂಜೀವ ಪಾಂಡ್ರೆ, ಸುರೇಶ ಕಡ್ಲಿಮಟ್ಟಿ, ಮುತ್ತು ಕುಲಕರ್ಣಿ, ನಿಂಗನಗೌಡ್ರ, ಮಹಾಲಿಂಗಯ್ಯ ಹಿರೇಮಠ, ರಘೋತ್ತಮ ಕೊಪ್ಪರ, ಬಸವರಾಜ ಪಟ್ಟಣಶೆಟ್ಟಿ, ಪ್ರಭುಸ್ವಾಮಿ ಅರವಟಗಿಮಠ, ರವೀಂದ್ರ ಹೊನವಾಡ, ಆದರ್ಶ ಕುಲಕರ್ಣಿ, ಮಲ್ಲಯ್ಯ ಗುಂಡಗೋಪುರಮಠ, ವೀರಣ್ಣ ಕುಂಬಾರ, ರಫೀಕ ಕಾಗದಗಾರ, ಗೌಸ್ ಬೆಟಗೇರಿ, ಛಾಯಾಗ್ರಾಹಕರಾದ ರಾಮಣ್ಣ ವಗ್ಗಿ, ವೈ.ಎಸ್. ಮಹೇಂದ್ರಕರ, ಲಿಂಗರಾಜ, ಖಾಜಾಸಾಬ ಬೂದಿಹಾಳ, ಪತ್ರಿಕಾ ಭವನದ ಸಹಾಯಕ ಪರಶುರಾಮ ಹಳ್ಳದ, ಡಾ.ಗಣೇಶ ಸುಲ್ತಾನಪೂರ, ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ರಾಜ್ಯಾಧ್ಯಕ್ಷ ಶಂಕರ ಕುದರಿಮೋತಿ, ಪತ್ರಿಕಾ ವಿತರಕರ ಸಂಘದ ಹಿರಿಯ ಸಲಹೆಗಾರ ಕೆ.ಎಸ್. ಹಿರೇಮಠ, ಸಿದ್ದು ಮಡಿವಾಳರ, ಮಂಜುನಾಥ ಕಬನೂರ, ಕಿರಣ ಮದ್ಲಿ ಒಳಗೊಂಡು ಪತ್ರಿಕಾ ವಿತರಕರು ಸೇರಿದಂತೆ ಹಲವರು ಉಪಸ್ಥಿತರಿದ್ದರು.



# ಕರವೇ ವತಿಯಿಂದ ಪ್ರಧಾನಿಗಳಿಗೆ ‘ರಕ್ತದಲ್ಲಿ ಪತ್ರ’ ಚಳುವಳಿ




■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ರಕ್ತ ಭಂಡಾರದಲ್ಲಿ ಕರವೇ ಕಾರ್ಯಕರ್ತರು ಸ್ವತಃ ರಕ್ತದಲ್ಲಿ ‘ಕಾವೇರಿ ಜಲ ವಿವಾದ ಕನ್ನಡಿಗರ ಮನೆ ಮನೆಗೆ ಬೆಂಕಿ ಹಚ್ಚಿದೆ. ಅದನ್ನು ಆರಿಸದಿದ್ದರೆ ನಾಳೆ ಅದು ರಾಷ್ಟ್ರವನ್ನು ಸುಟ್ಟೀತು’ ಎಂದು ಪತ್ರ ಬರೆಯುವ ಆಂದೋಲನಕ್ಕೆ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಕರವೇ ಗದಗ ಜಿಲ್ಲಾಧ್ಯಕ್ಷ ಶರಣು ಎಸ್. ಗೋಡಿ, ರಾಜ್ಯದಲ್ಲಿ ಮಳೆಯಿಲ್ಲದೇ ರೈತರು ಸಂಕಷ್ಟದಲ್ಲಿದ್ದಾರೆ. ಹೀಗಿರುವಾಗ ತಮಿಳುನಾಡಿಗೆ ನೀರು ಹರಿಸುವುದು ಅಸಾಧ್ಯ. ಈ ವಿಚಾರವಾಗಿ ಪ್ರಧಾನಿಯವರು ಮಧ್ಯ ಪ್ರವೇಶಿಸಬೇಕು ಎಂದು ಜಿಲ್ಲೆಯ ಕಾರ್ಯಕರ್ತರು ರಕ್ತದಲ್ಲಿ ಪತ್ರ ಬರೆಯುವ ಚಳುವಳಿಯ ಮೂಲಕ ಒತ್ತಾಯಿಸುತ್ತಿದ್ದೇವೆ. ಆ.9ರಂದು ಕರವೇ ರಾಜ್ಯಾಧ್ಯಕ್ಷ ಟಿ.ಎ ನಾರಾಯಣಗೌಡರ ನೇತೃತ್ವದಲ್ಲಿ 10 ಸಾವಿರ ಕಾರ್ಯಕರ್ತರು ದೆಹಲಿಗೆ ತೆರಳಿ ಆ.10ರಂದು ಜಂತರಮಂತರ್‌ನಲ್ಲಿ ಪ್ರತಿಭಟನೆ ನಡೆಸಲಿದ್ದೇವೆ. ಇನ್ನಾದರೂ ಕೇಂದ ಸರ್ಕಾರ ಎಚ್ಚೆತ್ತು ರಾಜ್ಯಕ್ಕಾಗಿರುವ ಅನ್ಯಾಯ ಸರಿಪಡಿಸಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ವೇದಿಕೆಯ ಪ್ರಮುಖರಾದ ಹನುಮಂತ ಅಬ್ಬಿಗೇರಿ, ಚೇತನ್ ಕಣವಿ, ನಿಂಗನಗೌಡ ಮಾಲಿಪಾಟೀಲ್, ಹನುಮಂತ ಪೂಜಾರ, ಅಜಯ್ ಕಂಬಳಿ, ಮಾರುತಿ ಈಳಗೇರ, ಕೃಷ್ಣ ಲಮಾಣಿ, ಯಲ್ಲಪ್ಪ ಬೋವಿ, ಆನಂದ ಹೊಸಮನಿ, ದಾದಾಪೀರ ನದಾಫ್, ಅಜೀಂ ಖಾಜಿ ದಾವಲ್ ತಹಸೀಲ್ದಾರ, ಇಸಾಕ್ ನದಾಫ್, ಸಲೀಂ ಶಿರ್ವಾರ್, ತೌಸಿಫ್ ಡಾಲಾಯತ್ ಮುಂತಾದವರು ಹಾಜರಿದ್ದರು.



ಹಳಿ ದಾಟುವಾಗ ರೈಲಿನಡಿ ಸಿಲುಕಿ ಮೊಸಳೆ ಸಾವನ್ನಪ್ಪಿದ ಘಟನೆ ಗದಗ ಜಿಲ್ಲೆಯ ರೋಣ ತಾಲೂಕಿನ ಹೊಳೆಆಲೂರು ಗ್ರಾಮದ ಬಳಿ ಜರುಗಿದೆ.



ಲಕ್ಷ್ಮೇಶ್ವರ ಸಮೀಪದ ಕೊಂಡಿಕೊಪ್ಪ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಗಾಂಧಿ ಜಯಂತಿ ಅಂಗವಾಗಿ ಟೀಂ ಚಿರನೂತನ್ ಸಂಸ್ಥೆಯವರು ಕಲಿಕಾ ಸಾಮಗ್ರಿಗಳನ್ನು ವಿತರಿಸಿದರು. ಈ ವೇಳೆ ರಾಮಣ್ಣ ಬಾಣದ, ಗಣೇಶ ಲಮಾಣಿ, ಕಾಶವ್ವ ದೊಡ್ಡಮನಿ, ಈರಪ್ಪ ತೆಗ್ಗೆಳ್ಳಿ, ನಾಗರಾಜ ಸವಣೂರ, ಮಂಜು ರಾಠೋಡ್, ತುಕಾರಾಮ ಲಮಾಣಿ, ಜಗದೀಶ ಗುಡಿ, ಸಂಗಮೇಶ ಗಡ್ಡೆಣ್ಣವರ, ಸಿದ್ದು ದುರಗಣ್ಣವರ ಸೇರಿ ಹಲವರಿದ್ದರು.



ಬೆಟಗೇರಿಯ ಮಂಜುನಾಥ ನಗರದಲ್ಲಿ ಸರ್ವಶಕ್ತಿ ವಿವಿಧೋದ್ದೇಶಗಳ ಸೇವಾ ಟ್ರಸ್ಟ್ ವತಿಯಿಂದ ಗಾಂಧಿ ಜಯಂತಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಹಿರಿಯರಾದ ಆರ್.ಎಲ್ ಮೇಳೆನವರ, ಲಕ್ಷ್ಮಣ ಭಜಂತ್ರಿ, ಸಂಘದ ಅಧ್ಯಕ್ಷ ಮಂಜುನಾಥ ಹಣಗಿ, ಪ್ರತೀಕ ಮೇಳೆನವರ, ರಾಮು ಜಮಾದಾರ, ಶ್ರೀಕಾಂತ ಆಲೂರ, ಮಂಜುನಾಥ ಮೇಳೆನವರ, ಚಿದಂಬರ ಹಣಿಸಿಮರದ, ರಮೇಶ್ ಹುಣಸಿಮರದ, ಪವನ ಬಸವಾ, ಸಂಜೀವ ಚಟ್ಟಿ, ಮಂಜುನಾಥ ಭಜಂತ್ರಿ, ಸಂಜೀವ ರಜಪುತ ಮುಂತಾದವರು ಉಪಸ್ಥಿತರಿದ್ದರು.

## ಯಾದವ ಸಂಘದ ಗದಗ ಜಿಲ್ಲಾ ಮಟ್ಟದ ‘ಶ್ರೀಕೃಷ್ಣ ಜಯಂತಿ’ಯಲ್ಲಿ ಸಚಿವ ಎಚ್.ಕೆ ಪಾಟೀಲ ಭರವಸೆ

# ಶ್ರೀಕೃಷ್ಣ ದೇವಸ್ಥಾನ, ಸಮುದಾಯ ಭವನ ನಿರ್ಮಾಣಕ್ಕೆ ನೆರವು

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾ ಗೊಲ್ಲ(ಯಾದವ) ಸಮುದಾದಯ ಶ್ರೀಕೃಷ್ಣ ದೇವಸ್ಥಾನ ಹಾಗೂ ಸಮುದಾಯ ಭವನ ನಿರ್ಮಾಣಕ್ಕೆ ನಿವೇಶನವನ್ನು ಗುರುತಿಸಿದರೆ ಆ ನಿವೇಶನ ಖರೀದಿಗೆ ಸರ್ಕಾರ ನಿಗದಿಪಡಿಸುವ ದರದಲ್ಲಿ ಶೇ.50ರಷ್ಟು ಹಣವನ್ನು ಒದಗಿಸುವುದಾಗಿ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಕೆ ಪಾಟೀಲ ಹೇಳಿದರು.

ಅವರು ಇಲ್ಲಿನ ಗಾಣಿಗ ಸಭಾಭವನದಲ್ಲಿ ಗದಗ ಜಿಲ್ಲಾ ಗೊಲ್ಲ (ಯಾದವ) ಸಂಘದ ಆಶ್ರಯದಲ್ಲಿ ಜರುಗಿದ ಶ್ರೀ ಕೃಷ್ಣ ಜಯಂತಿಯ ಉದ್ಘಾಟನೆ ನೆರವೇರಿಸಿ ಮಾತನಾಡಿದರು. ಶ್ರೀ ಕೃಷ್ಣ ಮನುಕುಲದ ಉದ್ಧಾರಕ. ಶ್ರೀ ಕೃಷ್ಣ ಎಂಬ ಪದವೇ ನಮ್ಮೆಲ್ಲರನ್ನು ಸಮ್ಮೋಹನಗೊಳಿಸುತ್ತದೆ. ವಯಕ್ತಿಕವಾಗಿಯೂ ನನ್ನ ಜೀವನದಲ್ಲಿ ಶ್ರೀಕೃಷ್ಣನೊಂದಿಗೆ ಅವಿನಾಭಾವ ಸಂಬಂಧವಿದೆ. ನನ್ನ ತಂದೆಯ ಹೆಸರು ಕೃಷ್ಣಗೌಡ ಹಾಗೂ ನನ್ನ ಮಗನ ಹೆಸರು ಕೂಡ ಕೃಷ್ಣಗೌಡ. ಗೊಲ್ಲ ಸಮುದಾಯದವರು ಸಂಘಟಿತರಾಗಿ ಹೆಚ್ಚಿನ ಸಂಖ್ಯೆಯಲ್ಲಿ ಸೇರಿರುವುದು ಖುಷಿ ನೀಡಿದೆ ಎಂದು ನುಡಿದರು.




ಮುಖ್ಯ ಅತಿಥಿಗಳಾಗಿ ರಾಜ್ಯ ಯಾದವ ಸಂಘದ ರಾಜ್ಯಾಧ್ಯಕ್ಷ ಡಿ.ಟಿ ಶ್ರೀನಿವಾಸ ಮಾತನಾಡಿ, ರಾಜ್ಯದಲ್ಲಿ ಚಿಕ್ಕ ಸಮುದಾಯದವರಾದ ನಾವು ಒಗ್ಗಟ್ಟು ಪ್ರದರ್ಶಿಸಬೇಕಿದೆ ಎಂದರು. ಇನ್ನೋರ್ವ ಮುಖ್ಯ ಅತಿಥಿ, ವಿ.ಪ ಸದಸ್ಯ ನಾಗರಾಜ ಯಾದವ ಮಾತನಾಡಿ, ಹಿಂದುಳಿದ ಸಮಾಜದ ಏಳಿಗೆಗೆ ನಾವು ಪಣ ತೊಡಬೇಕು. ನಮ್ಮ ರಕ್ತದಲ್ಲಿ ನಾಯಕತ್ವ ಗುಣವಿದೆ. ಶ್ರಮ ಮತ್ತು ಛಲದಿಂದ ನಾವು ಮೇಲೆ ಬರಬೇಕು. ಪ್ರತಿಯೊಬ್ಬರೂ ಶಿಕ್ಷಣವನ್ನು ಪಡೆದುಕೊಳ್ಳಬೇಕೆಂದು ಹೇಳಿದರು. ಕಾರ್ಯಕ್ರಮದ ವೇದಿಕೆಯ ಮೇಲೆ ಶಿರಹಟ್ಟಿ ಶಾಸಕ ಡಾ. ಚಂದ್ರು ಲಮಾಣಿ, ಮಾಜಿ ಶಾಸಕ ಬಿ.ಆರ್ ಯಾವಗಲ್, ಜಿ.ಪಂ ಮಾಜಿ ಅಧ್ಯಕ್ಷ ಸಿದ್ದು ಪಾಟೀಲ್, ನಗರಸಭೆ ಮಾಜಿ ಅಧ್ಯಕ್ಷ ಬಿ.ಬಿ ಅಸೂಟಿ, ರಾಮನಗೌಡ ಪಾಟೀಲ್, ಯು.ಎಸ್ ಬೆಂತೂರ, ಯಾದವ ಸಂಘದ ಅಧ್ಯಕ್ಷ ಹರೀಶ್ ಪೂಜಾರ, ಗೌರವಾಧ್ಯಕ್ಷ ವಾಯ್. ಎಸ್ ಹಣಮರ್, ಶಂಕರಗೌಡ ಪಾಟೀಲ, ರಾಮನಗೌಡ ಪಾಟೀಲ, ಯಲ್ಲಪ್ಪಗೌಡ ಪಾಟೀಲ, ಪರಸಪ್ಪ ಮ್ಯಾಗೇರಿ, ಬಸವರಾಜ ಪೂಜಾರ, ಪಿ.ಎಫ್ ಗೌಡರ್, ಶ್ರೀನಿವಾಸ ಭಂಡಾರಿ, ಮಣಿಕಂಠ ಭಂಡಾರಿ, ಗೋವಿಂದ ಪೂಜಾರ, ಎಸ್.ಕೆ ಅಯ್ಯನಗೌಡರ, ಮಹಾದೇವಿ ಮೇಲ್ಮನಿ, ವೆಂಕಟೇಶ್ ಪೂಜಾರ, ಬಸಲಿಂಗಪ್ಪ ಹಡಗಲಿ, ಯಂಕಪ್ಪ ಮೇಲಮನಿ, ನಿಂಗರಾಜ್ ಸುರಣಗಿ, ಅಶೋಕ ಗಾಂಜಿ, ರಾಜ್ಯ ಯಾದವ ಸಂಘದ ಪದಾಧಿಕಾರಿಗಳಾದ ಮಾರಪ್ಪ ಯಾದವ, ಉಮಾಶಂಕರ, ಶ್ರೀನಿವಾಸ ಯಾದವ, ಕೃಷ್ಣಪ್ಪ, ಹಾಗೂ ಗೋವಿಂದರಾಜುಲು ಸೇರಿದಂತೆ 10ಕ್ಕೂ ಹೆಚ್ಚು ಬೇರೆ ಬೇರೆ ಜಿಲ್ಲೆಗಳ ಯಾದವ ಸಮುದಾಯದ ಅಧ್ಯಕ್ಷರು, ಸಮಾಜದ 3000ಕ್ಕೂ ಹೆಚ್ಚು ಬಾಂಧವರು, ಹಿರಿಯರು ಪಾಲ್ಗೊಂಡಿದ್ದರು. ಪುರುಷೋತ್ತಮ್ ಪೂಜಾರ್ ಸ್ವಾಗತಿಸಿದರು. ಎಂ.ಸಂದೀಪ್ ವಂದಿಸಿದರು.

ಸಮಾರಂಭದ ದಿವ್ಯ ಸಾನ್ನಿಧ್ಯವನ್ನು ಚಿತ್ರದುರ್ಗದ ಯಾದವಾನಂದ ಶ್ರೀಗಳು ವಹಿಸಿದ್ದರು. ಇದೇ ಸಂದರ್ಭದಲ್ಲಿ ಸಾಧಕರಾದ ಡಾ. ಆನಂದ ಪಾಟೀಲ, ಡಾ. ಮಂಜುನಾಥ ಗುಂಡಳ್ಳಿ, ಡಾ. ವಿವೇಕ ಇಟಗಿ, ಸಾಹಿತಿಗಳಾದ ನಾಗರಾಜ ಹುಡೇದ ಅವರನ್ನು ವರ್ಷದ ‘ಯಾದವಶ್ರೀ’ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಜಿಲ್ಲಾ ಯಾದವ ಸಂಘದ ಅಧ್ಯಕ್ಷ ಹರೀಶ ಪೂಜಾರ ಪ್ರಾಸ್ತಾವಿಕ ನುಡಿಗಳನ್ನಾಡಿದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka